# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 845(862) |
| ಮಾನ್ಯ ಸದಸ್ಯರ ಹೆಸರು | : | ಡಾ|| ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ಸಚಿವರು | : | ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 24.08.2026 |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಗ್ರಂಥಾಲಯ ಇಲಾಖೆಯಲ್ಲಿ ಕಳೆದ 3 ವರ್ಷದಿಂದ ಇಲ್ಲಿಯವರೆಗೆ ಎಷ್ಟು ಪುಸ್ತಕಗಳನ್ನು ಖರೀದಿಸಲಾಗಿದೆ ಹಾಗೂ ಪುಸ್ತಕದ ವಿವರಗಳನ್ನು ನೀಡುವುದು. | 2023-24 ರಿಂದ 2025 26 ರವರೆಗೆ ಸಾರ್ವಜನಿಕ ಗ್ರಂಥಾಲಯ ಇಲಾಖೆಯಿಂದ ಖರೀದಿಸಿದ ಪುಸ್ತಕಗಳ ವಿವರ ಈ ಕೆಳಕಂಡಂತಿದೆ. |

**ಜಿಲ್ಲಾ ಕೇಂದ್ರ ಗ್ರಂಥಾಲಯ**

| ಕ್ರ.ಸಂ. | ವರ್ಷಗಳು | ಖರೀದಿಸಿದ ಪುಸ್ತಕಗಳ ಸಂಖ್ಯೆ |
|---|---|---|
| 1 | 2023-24 | 637203 |
| 2 | 2024-25 | 413970 |
| 3 | 2025-26 | 558129 |
| | **ಒಟ್ಟು** | **1609302** |

**ನಗರ ಕೇಂದ್ರ ಗ್ರಂಥಾಲಯ**

| ಕ್ರ.ಸಂ. | ವರ್ಷಗಳು | ಖರೀದಿಸಿದ ಪುಸ್ತಕಗಳ ಸಂಖ್ಯೆ |
|---|---|---|
| 1 | 2023-24 | 3480685 |
| 2 | 2024-25 | 1477106 |
| 3 | 2025-26 | 1353359 |
| | **ಒಟ್ಟು** | **6311150** |

| | | |
|---|---|---|
| | | **ಜಿಲ್ಲಾಮತ್ತು ನಗರ ಕೇಂದ್ರ ಗ್ರಂಥಾಲಯಗಳಿಂದ ಖರೀದಿಸಿದ ಒಟ್ಟು ಪುಸ್ತಕಗಳ ಸಂಖ್ಯೆ**<br><br>ಕ್ರ.ಸಂ. / ವರ್ಷಗಳು / ಖರೀದಿಸಿದ ಪುಸ್ತಕಗಳ ಸಂಖ್ಯೆ<br>1 / 2023-24 / 4117888<br>2 / 2024-25 / 1891076<br>3 / 2025-26 / 1911488<br>ಒಟ್ಟು / 7920452<br><br>ವಿವರವನ್ನು **ಅನುಬಂಧ-1** ಮತ್ತು **ಅನುಬಂಧ-2** ರಲ್ಲಿ ಒದಗಿಸಿದೆ. |
| (ಆ) | ಖರೀದಿಸಲಾಗಿರುವ ಪುಸ್ತಕಗಳ ಒಟ್ಟು ಹಣವೆಷ್ಟು; ಇದುವರೆಗೂ ಎಷ್ಟು ಹಣವನ್ನು ಪ್ರಕಾಶಕರಿಗೆ ಪಾವತಿಸಲಾಗಿದೆ; | 2023-24 ರಿಂದ 2025-26 ರವರೆಗೆ ಸಾರ್ವಜನಿಕ ಗ್ರಂಥಾಲಯ ಇಲಾಖೆಯಿಂದ ಖರೀದಿಸಲಾಗಿರುವ ಒಟ್ಟು ಪುಸ್ತಕಗಳ ಮೊತ್ತದ ವಿವರ ಈ ಕೆಳಕಂಡಂತಿದೆ. |

**ಜಿಲ್ಲಾಮತ್ತು ನಗರ ಕೇಂದ್ರ ಗ್ರಂಥಾಲಯಗಳಿಂದ ಖರೀದಿಸಿದ ಒಟ್ಟು ಪುಸ್ತಕಗಳ ಸಂಖ್ಯೆ**

| ಕ್ರ.**ಸಂ.** | ವರ್ಷಗಳು | ಖರೀದಿಸಿದ ಪುಸ್ತಕಗಳ ಸಂಖ್ಯೆ |
|---|---|---|
| 1 | 2023-24 | 4117888 |
| 2 | 2024-25 | 1891076 |
| 3 | 2025-26 | 1911488 |
| | **ಒಟ್ಟು** | **7920452** |

**ಜಿಲ್ಲಾ ಕೇಂದ್ರ ಗ್ರಂಥಾಲಯ**

| ಕ್ರ.**ಸಂ.** | ವರ್ಷಗಳು | ಪುಸ್ತಕಗಳ ಒಟ್ಟು ಮೊತ್ತ | ಪ್ರಕಾಶಕರಿಗೆ ಪಾವತಿಸಿದ ಮೊತ್ತ |
|---|---|---|---|
| 1 | 2023-24 | 121452454 | 118877143 |
| 2 | 2024-25 | 80777672 | 79061760 |
| 3 | 2025-26 | 103178502 | 101302227 |
| | **ಒಟ್ಟು** | **305408628** | **299241130** |

**ನಗರ ಕೇಂದ್ರ ಗ್ರಂಥಾಲಯ**

| ಕ್ರ.**ಸಂ.** | ವರ್ಷಗಳು | ಪುಸ್ತಕಗಳ ಒಟ್ಟು ಮೊತ್ತ | ಪ್ರಕಾಶಕರಿಗೆ ಪಾವತಿಸಿದ ಮೊತ್ತ |
|---|---|---|---|
| 1 | 2023-24 | 482725262 | 468258514 |
| 2 | 2024-25 | 337042088 | 313978711 |
| 3 | 2025-26 | 247383294 | 239503913 |
| | **ಒಟ್ಟು** | **1067150644** | **1021741138** |

<table>
<tr>
<td></td>
<td></td>
<td>ಜಿಲ್ಲಾ ಮತ್ತು ನಗರ ಕೇಂದ್ರ ಗ್ರಂಥಾಲಯಗಳಿಂದ ಖರೀದಿಸಿದ ಒಟ್ಟು ಪುಸ್ತಕಗಳ ಹಾಗೂ ಪ್ರಕಾಶಕರಿಗೆ ಪಾವತಿಸಿದ ಮೊತ್ತ<br>
<table>
<tr><th>ಕ್ರ.ಸಂ.</th><th>ವರ್ಷಗಳು</th><th>ಪುಸ್ತಕಗಳ ಒಟ್ಟು ಮೊತ್ತ</th><th>ಪ್ರಕಾಶಕರಿಗೆ ಪಾವತಿಸಿದ ಮೊತ್ತ</th></tr>
<tr><td>1</td><td>2023-24</td><td>604177716</td><td>587135657</td></tr>
<tr><td>2</td><td>2024-25</td><td>417819760</td><td>393040471</td></tr>
<tr><td>3</td><td>2025-26</td><td>350561796</td><td>340806140</td></tr>
<tr><td></td><td>ಒಟ್ಟು</td><td>1372559272</td><td>1320982268</td></tr>
</table>
ವಿವರವನ್ನು ಅನುಬಂಧ-3 ಮತ್ತು ಅನುಬಂಧ-4 ರಲ್ಲಿ ಒದಗಿಸಿದೆ.</td>
</tr>
<tr>
<td>(ಇ)</td>
<td>ಪುಸ್ತಕ ಖರೀದಿ ಮಾಡುವ ಸಂದರ್ಭದಲ್ಲಿ ಸರ್ಕಾರ ರೂಪಿಸಿರುವ ನೀತಿ ನಿಯಮಗಳೇನು; ಹಾಗೂ ಎಷ್ಟು ದಿನಗಳ ಒಳಗೆ ಲೇಖಕರಿಗೆ ಅಥವಾ ಪ್ರಕಾಶಕರಿಗೆ ಹಣ ಪಾವತಿಸಬೇಕು;</td>
<td>ಸರ್ಕಾರದ ಆದೇಶ ಸಂ: ಇಡಿ 1 ಎಲ್‌ಬಿಪಿ 2004 ದಿನಾಂಕ: 07-02-2005ರ ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಅನ್ವಯಿಸುವ ಪುಸ್ತಕ ಆಯ್ಕೆ ಮತ್ತು ಖರೀದಿಗೆ ಸಂಬಂಧಿಸಿದ ಮಾರ್ಗಸೂಚಿಗಳ ಆದೇಶ ಪ್ರತಿಗಳನ್ನು ಅನುಬಂಧ-5ರಲ್ಲಿ ಒದಗಿಸಿದೆ. ಅನುದಾನದ ಲಭ್ಯತೆಗೆ ಅನುಗುಣವಾಗಿ ಸರಬರಾಜು ಮಾಡಿದ ಲೇಖಕರು, ಲೇಖಕ-ಪ್ರಕಾಶಕರು ಹಾಗೂ ಪ್ರಕಾಶನ ಸಂಸ್ಥೆಗಳಿಗೆ ನಿಯಮಾನುಸಾರ ಪಾವತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಪಾವತಿ ಗಡುವಿಗೆ ನಿಯಮಗಳನ್ನು ರಚಿಸಿರುವುದಿಲ್ಲ.</td>
</tr>
<tr>
<td>(ಈ)</td>
<td>2022ರಲ್ಲಿ ಗ್ರಂಥಾಲಯ ಇಲಾಖೆಯಿಂದ ಖರೀದಿಸಲಾದ ಪುಸ್ತಕಗಳಿಗೆ ಕೋಟ್ಯಂತರ ರೂಪಾಯಿಗಳನ್ನು ಬಾಕಿ ಉಳಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ</td>
<td>2022ನೇ ಸಾಲಿನಲ್ಲಿ ಸಾರ್ವಜನಿಕ ಗ್ರಂಥಾಲಯ ಇಲಾಖೆಯಿಂದ ಖರೀದಿಸಲಾದ ಪುಸ್ತಕಗಳ ಮೊತ್ತದಲ್ಲಿ ಯಾವುದೇ ಬಾಕಿ ಪಾವತಿ ಇರುವುದಿಲ್ಲ.</td>
</tr>
<tr>
<td>(ಉ)</td>
<td>ರಾಜ್ಯ ಗ್ರಂಥಾಲಯ ಪ್ರಾಧಿಕಾರದ ಖಾತೆಯಲ್ಲಿ ಎಷ್ಟು ಇಡುಗಂಟಿದೆ ಹಾಗೂ ಸ್ಥಳೀಯ ಸಂಸ್ಥೆಗಳು ಮತ್ತು ಬಿಬಿಎಂಪಿಯಿಂದ ವಸೂಲಿ ಮಾಡುತ್ತಿರುವ ಗ್ರಂಥಾಲಯ ಉಪಕರದ ಹಣವು ಸರ್ಕಾರಕ್ಕೆ ಸಂದಾಯವಾಗುತ್ತಿದೆಯೇ; ಹಾಗೂ ಬಾಕಿ ಇದ್ದಲ್ಲಿ ಎಷ್ಟು ವರ್ಷಗಳಿಂದ ಬಾಕಿ ಉಳಿಸಿಕೊಳ್ಳಲಾಗಿದೆ? (ಪೂರ್ಣ ವಿವರ ಒದಗಿಸುವುದು)</td>
<td>ರಾಜ್ಯ ಗ್ರಂಥಾಲಯ ಪ್ರಾಧಿಕಾರದ ಖಾತೆಯಲ್ಲಿ ರೂ.45.35 ಕೋಟಿಗಳಷ್ಟು ಇಡುಗಂಟಿದೆ.<br><br>ಸ್ಥಳೀಯ ಸಂಸ್ಥೆಗಳು ಮತ್ತು ಬಿಬಿಎಂಪಿಯಿಂದ ವಸೂಲಿ ಮಾಡುತ್ತಿರುವ ಗ್ರಂಥಾಲಯ ಉಪಕರದ ಹಣವು ಸರ್ಕಾರಕ್ಕೆ ಸಂದಾಯವಾಗುತ್ತಿರುವುದಿಲ್ಲ. ಬದಲಾಗಿ ಆಯಾ ಜಿಲ್ಲಾ ಹಾಗೂ ನಗರ ಗ್ರಂಥಾಲಯ ಪ್ರಾಧಿಕಾರ ನಿಧಿಗಳಿಗೆ ಸಂದಾಯವಾಗುತ್ತಿದೆ.</td>
</tr>
</table>

| | | |
|---|---|---|
| | | ದಿನಾಂಕ 31-03-2026ರ ಅಂತ್ಯಕ್ಕೆ ಸ್ಥಳೀಯ ಸಂಸ್ಥೆಗಳು ಹಾಗೂ ಬಿಬಿಎಂಪಿಯಿಂದ ಒಟ್ಟು ರೂ.524.38 ಕೋಟಿ ಗ್ರಂಥಾಲಯ ಉಪಕರದ ಮೊತ್ತ ಬಾಕಿ ಉಳಿದಿದೆ. ಈ ಬಾಕಿ ಮೊತ್ತವು ಹಿಂದಿನ ಆರ್ಥಿಕ ವರ್ಷಗಳಿಂದಲೂ ಮುಂದುವರಿದು ಬಂದಿರುವ ಬಾಕಿಯಾಗಿದೆ. |

**ಸಂಖ್ಯೆ:ಇಪಿ 94 ಎಲ್‌ಬಿಬಿ 2026**

**(ಎಸ್. ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

# ಅನುಬಂಧ-1

## ಕಳೆದ 3 ವರ್ಷಗಳಲ್ಲಿ ಜಿಲ್ಲಾ ಕೇಂದ್ರ ಗ್ರಂಥಾಲಯಗಳಿಂದ ಖರೀದಿಸಿದ ಪುಸ್ತಕಗಳ ವಿವರ

| ಕ್ರ. ಸಂ. | ಜಿಲ್ಲಾ ಕೇಂದ್ರ ಗ್ರಂಥಾಲಯದ ಹೆಸರು | ಖರೀದಿಸಿದ ಪುಸ್ತಕಗಳು | | |
|---|---|---|---|---|
| | | 2023-24 | 2024-25 | 2025-26 |
| 1 | ಬಾಗಲಕೋಟೆ | 45560 | 37586 | 47693 |
| 2 | ಬಳ್ಳಾರಿ | 10761 | 6134 | 10852 |
| 3 | ಬೆಂಗಳೂರು ಗ್ರಾ. | 23027 | 16732 | 36489 |
| 4 | ಬೆಂಗಳೂರು ನಗರ | 127735 | 55633 | 107258 |
| 5 | ಬೆಳಗಾವಿ | 34164 | 34701 | 36518 |
| 6 | ಬೀದರ್ | 10250 | 11972 | 4163 |
| 7 | ಚಾಮರಾಜನಗರ | 13548 | 7783 | 9297 |
| 8 | ಚಿಕ್ಕಮಗಳೂರು | 15781 | 10292 | 8327 |
| 9 | ಚಿಕ್ಕಬಳ್ಳಾಪುರ | 22434 | 16953 | 26742 |
| 10 | ಚಿತ್ರದುರ್ಗ | 15864 | 4630 | 12921 |
| 11 | ದಕ್ಷಿಣ ಕನ್ನಡ | 20991 | 17789 | 31061 |
| 12 | ದಾವಣಗೆರೆ | 16649 | 5301 | 14427 |
| 13 | ಧಾರವಾಡ | 9787 | 0 | 6050 |
| 14 | ಗದಗ | 6457 | 5486 | 6594 |
| 15 | ಹಾಸನ | 17437 | 9715 | 11843 |
| 16 | ಹಾವೇರಿ | 26906 | 25787 | 18173 |
| 17 | ಕಲಬುರಗಿ | 13711 | 15070 | 20175 |
| 18 | ಮಡಿಕೇರಿ | 13900 | 4839 | 9648 |
| 19 | ಕೋಲಾರ | 7580 | 8385 | 12373 |
| 20 | ಕೊಪ್ಪಳ | 16152 | 5200 | 18696 |
| 21 | ಮಂಡ್ಯ | 8019 | 383 | 7927 |
| 22 | ಮೈಸೂರು | 25390 | 23765 | 14111 |
| 23 | ರಾಯಚೂರು | 4525 | 9474 | 12225 |
| 24 | ರಾಮನಗರ | 23959 | 17583 | 19435 |
| 25 | ಶಿವಮೊಗ್ಗ | 18846 | 4928 | 12289 |
| 26 | ತುಮಕೂರು | 16922 | 9087 | 0 |
| 27 | ಉಡುಪಿ | 5913 | 5445 | 8411 |
| 28 | ಉತ್ತರ ಕನ್ನಡ | 45330 | 23692 | 19160 |
| 29 | ವಿಜಯನಗರ | 8801 | 5280 | 4412 |
| 30 | ವಿಜಯಪುರ | 3518 | 8139 | 3779 |
| 31 | ಯಾದಗಿರಿ | 7286 | 6206 | 7080 |
| | ಒಟ್ಟು | **637203** | **413970** | **558129** |

ಆಯುಕ್ತರು
ಸಾರ್ವಜನಿಕ ಗ್ರಂಥಾಲಯ ಇಲಾಖೆ
ಬೆಂಗಳೂರು

# ಅನುಬಂಧ-2

**ಕಳೆದ 3 ವರ್ಷಗಳಲ್ಲಿ ನಗರ ಕೇಂದ್ರ ಗ್ರಂಥಾಲಯಗಳಿಂದ ಖರೀದಿಸಿದ ಪುಸ್ತಕಗಳ ವಿವರ**

| ಕ್ರ. ಸಂ. | ನಗರ ಕೇಂದ್ರ ಗ್ರಂಥಾಲಯದ ಹೆಸರು | ಖರೀದಿಸಿದ ಪುಸ್ತಕಗಳು | | |
|---|---|---|---|---|
| | | **2023-24** | **2024-25** | **2025-26** |
| 1 | ಆಯುಕ್ತರ ಕಛೇರಿ | 1311844 | 0 | 0 |
| 2 | ಪೂರ್ವ ವ,ಬೆಂ | 336183 | 191803 | 181863 |
| 3 | ಪಶ್ಚಿಮ ವ, ಬೆಂ. | 319543 | 222399 | 180528 |
| 4 | ಉತ್ತರ ವ, ಬೆಂ. | 309898 | 234677 | 183141 |
| 5 | ದಕ್ಷಿಣ ವ, ಬೆಂ. | 313571 | 287998 | 191971 |
| 6 | ಕೇಂದ್ರ ವ, ಬೆಂ | 362075 | 191964 | 192984 |
| 7 | ಬಳ್ಳಾರಿ | 21866 | 16106 | 20215 |
| 8 | ಹೊಸಪೇಟೆ | 17249 | 10720 | 11512 |
| 9 | ಬೆಳಗಾವಿ | 48267 | 49313 | 37075 |
| 10 | ಬೀದರ್ | 10241 | 1477 | 2262 |
| 11 | ಚಿಕ್ಕಮಗಳೂರು | 12057 | 11943 | 11337 |
| 12 | ಚಿತ್ರದುರ್ಗ | 17348 | 12178 | 14415 |
| 13 | ಮಂಗಳೂರು | 100185 | 52146 | 88716 |
| 14 | ದಾವಣಗೆರೆ | 21535 | 15575 | 18056 |
| 15 | ಧಾರವಾಡ | 60311 | 44856 | 22181 |
| 16 | ಗದಗ | 10143 | 9716 | 10327 |
| 17 | ಹಾಸನ | 16426 | 9922 | 14903 |
| 18 | ಕಲಬುರಗಿ | 22528 | 8945 | 11999 |
| 19 | ಕೆ.ಜಿ.ಎಫ್. | 1843 | 1805 | 2906 |
| 20 | ಮಂಡ್ಯ | 11665 | 7404 | 12860 |
| 21 | ಮೈಸೂರು | 74844 | 19971 | 40844 |
| 22 | ರಾಯಚೂರು | 16232 | 12301 | 11606 |
| 23 | ಭದ್ರಾವತಿ | 4508 | 4051 | 4400 |
| 24 | ಶಿವಮೊಗ್ಗ | 5741 | 11662 | 13300 |
| 25 | ತುಮಕೂರು | 0 | 15011 | 20817 |
| 26 | ಉಡುಪಿ | 24697 | 17121 | 13034 |
| 27 | ವಿಜಯಪುರ | 29885 | 16042 | 40107 |
| | ಮೊತ್ತ: | **3480685** | **1477106** | **1353359** |

ಆಯುಕ್ತರು

ಸಾರ್ವಜನಿಕ ಗ್ರಂಥಾಲಯ ಇಲಾಖೆ

ಬೆಂಗಳೂರು

# ಅನುಬಂಧ-3

**ಕಳೆದ 3 ವರ್ಷಗಳಲ್ಲಿ ಜಿಲ್ಲಾ ಕೇಂದ್ರ ಗ್ರಂಥಾಲಯಗಳಿಂದ ಖರೀದಿಸಿದ ಪುಸ್ತಕಗಳ ಮೊತ್ತ ಮತ್ತು ಪ್ರಕಾಶಕರಿಗೆ ಪಾವತಿಸಿದ ಮೊತ್ತದ ವಿವರ**

| ಕ್ರ. ಸಂ. | ಜಿಲ್ಲಾ ಕೇಂದ್ರ ಗ್ರಂಥಾಲಯದ ಹೆಸರು | ಖರೀದಿಸಿದ ಪುಸ್ತಕಗಳ ಮೊತ್ತ | | | ಪ್ರಕಾಶಕರಿಗೆ ಪಾವತಿಸಿದ ಮೊತ್ತ | | |
|---|---|---|---|---|---|---|---|
| | | 2023-24 | 2024-25 | 2025-26 | 2023-24 | 2024-25 | 2025-26 |
| 1 | ಬಾಗಲಕೋಟೆ | 8172829 | 7942029 | 9563946 | 8172829 | 7942029 | 9563946 |
| 2 | ಬಳ್ಳಾರಿ | 1941558 | 1130882 | 2011330 | 1941558 | 1130882 | 2011330 |
| 3 | ಬೆಂಗಳೂರು ಗ್ರಾ. | 4088736 | 3095308 | 6588466 | 4088736 | 3095308 | 6588466 |
| 4 | ಬೆಂಗಳೂರು ನಗರ | 24021016 | 10128633 | 18827662 | 24021016 | 10128633 | 18827662 |
| 5 | ಬೆಳಗಾವಿ | 5995513 | 5998910 | 6185951 | 4795764 | 4799076 | 4956777 |
| 6 | ಬೀದರ್ | 2086000 | 2180000 | 741000 | 2085000 | 2179000 | 737000 |
| 7 | ಚಾಮರಾಜನಗರ | 2429139 | 1333110 | 1483748 | 2429139 | 1333110 | 1483748 |
| 8 | ಚಿಕ್ಕಮಗಳೂರು | 2801681 | 2195191 | 1248568 | 2801681 | 2195191 | 1248568 |
| 9 | ಚಿಕ್ಕಬಳ್ಳಾಪುರ | 3884523 | 3475061 | 4787571 | 3884523 | 3475061 | 4787571 |
| 10 | ಚಿತ್ರದುರ್ಗ | 2857233 | 1127072 | 2651299 | 2857233 | 1127072 | 2651299 |
| 11 | ದಕ್ಷಿಣ ಕನ್ನಡ | 8025229 | 3498793 | 5458255 | 8025229 | 3498793 | 5458255 |
| 12 | ದಾವಣಗೆರೆ | 2999447 | 1096396 | 2590581 | 2999447 | 1096396 | 2590581 |
| 13 | ಧಾರವಾಡ | 1647701 | 0 | 1043416 | 1647701 | 0 | 1043416 |
| 14 | ಗದಗ | 1024000 | 1078000 | 1269000 | 1181000 | 1078000 | 1247000 |
| 15 | ಹಾಸನ | 3108627 | 1894989 | 2304096 | 3108627 | 1894989 | 2304096 |
| 16 | ಹಾವೇರಿ | 4916392 | 4827364 | 3530479 | 4916392 | 4827364 | 3530479 |
| 17 | ಕಲಬುರಗಿ | 2715290 | 2658349 | 3903383 | 2693765 | 2642852 | 3850683 |
| 18 | ಮಡಿಕೇರಿ | 2475906 | 904263 | 1683684 | 2475906 | 904263 | 1683684 |
| 19 | ಕೋಲಾರ | 1453141 | 1587252 | 2320938 | 1432651 | 1557132 | 2230637 |
| 20 | ಕೊಪ್ಪಳ | 2785000 | 969000 | 3595000 | 2785000 | 969000 | 3595000 |
| 21 | ಮಂಡ್ಯ | 1200181 | 77915 | 1460529 | 1200181 | 77915 | 1460529 |
| 22 | ಮೈಸೂರು | 4999938 | 4526334 | 2712938 | 4999938 | 4526334 | 2712938 |
| 23 | ರಾಯಚೂರು | 1613367 | 2589418 | 2615175 | 1613367 | 2589418 | 2615175 |
| 24 | ರಾಮನಗರ | 4955665 | 3499897 | 3903901 | 4569842 | 3094436 | 3588801 |
| 25 | ಶಿವಮೊಗ್ಗ | 2402399 | 1153230 | 2326500 | 2402399 | 1153230 | 2326500 |
| 26 | ತುಮಕೂರು | 2988730 | 1747883 | 0 | 2988730 | 1747883 | 0 |
| 27 | ಉಡುಪಿ | 1051000 | 1138000 | 1457000 | 947000 | 1074000 | 1294000 |
| 28 | ಉತ್ತರ ಕನ್ನಡ | 7999696 | 4989418 | 3554589 | 7999696 | 4989418 | 3554589 |
| 29 | ವಿಜಯನಗರ | 1478317 | 1021011 | 913729 | 1478317 | 1021011 | 913729 |
| 30 | ವಿಜಯಪುರ | 875530 | 1548206 | 684163 | 875530 | 1548206 | 684163 |
| 31 | ಯಾದಗಿರಿ | 2458670 | 1365758 | 1761605 | 1458946 | 1365758 | 1761605 |
| | **ಒಟ್ಟು** | **121452454** | **80777872** | **103178502** | **118877143** | **79061760** | **101302227** |

ಆಯುಕ್ತರು
ಸಾರ್ವಜನಿಕ ಗ್ರಂಥಾಲಯ ಇಲಾಖೆ
ಬೆಂಗಳೂರು

# ಅನುಬಂಧ-4

ಕಳೆದ 3 ವರ್ಷಗಳಲ್ಲಿ ನಗರ ಕೇಂದ್ರ ಗ್ರಂಥಾಲಯಗಳಿಂದ ಖರೀದಿಸಿದ ಪುಸ್ತಕಗಳ ವಿವರ

| ಕ್ರ. ಸಂ. | ನಗರ ಕೇಂದ್ರ ಗ್ರಂಥಾಲಯದ ಹೆಸರು | ಖರೀದಿಸಿದ ಪುಸ್ತಕಗಳ ಮೊತ್ತ | | | ಪ್ರಕಾಶಕರಿಗೆ ಪಾವತಿಸಿದ ಮೊತ್ತ | | |
|---|---|---|---|---|---|---|---|
| | | 2023-24 | 2024-25 | 2025-26 | 2023-24 | 2024-25 | 2025-26 |
| 1 | ಆಯುಕ್ತರ ಕಛೇರಿ | 85536000 | 65673000 | 0 | 85536000 | 65673000 | 0 |
| 2 | ಪೂರ್ವ ವ,ಬೆಂ | 60930000 | 35139000 | 33182000 | 59118000 | 34348000 | 31754000 |
| 3 | ಪಶ್ಚಿಮ ವ, ಬೆಂ. | 59897000 | 40188000 | 32839000 | 58379787 | 39612542 | 31333377 |
| 4 | ಉತ್ತರ ವ, ಬೆಂ. | 55860000 | 41267000 | 33052000 | 55860000 | 41267000 | 33052000 |
| 5 | ದಕ್ಷಿಣ ವ, ಬೆಂ. | 57734000 | 52444000 | 34781000 | 51728324 | 51482039 | 33972752 |
| 6 | ಕೇಂದ್ರ ವ, ಬೆಂ | 67912000 | 36612000 | 34956000 | 66792000 | 35668000 | 33825000 |
| 7 | ಬಳ್ಳಾರಿ | 3645928 | 3076254 | 4157382 | 3228107 | 2671919 | 3434691 |
| 8 | ಹೊಸಪೇಟೆ | 2967445 | 2026170 | 2191000 | 2967445 | 2026170 | 2191000 |
| 9 | ಬೆಳಗಾವಿ | 7839590 | 7972019 | 6344191 | 6678123 | 6377027 | 5148401 |
| 10 | ಬೀದರ್ | 1988000 | 306000 | 449000 | 1983000 | 300500 | 449000 |
| 11 | ಚಿಕ್ಕಮಗಳೂರು | 1929000 | 2244000 | 2006684 | 1929000 | 2244000 | 2006684 |
| 12 | ಚಿತ್ರದುರ್ಗ | 3041780 | 2392000 | 2893761 | 3041780 | 2392000 | 2893761 |
| 13 | ಮಂಗಳೂರು | 19028644 | 9737849 | 16032893 | 18782879 | 9565759 | 15724589 |
| 14 | ದಾವಣಗೆರೆ | 3936000 | 2886000 | 3336000 | 3557182 | 2355181 | 2970252 |
| 15 | ಧಾರವಾಡ | 10972000 | 8304000 | 3883209 | 10178829 | 7857936 | 3823494 |
| 16 | ಗದಗ | 1997000 | 1923000 | 1984000 | 1900000 | 1903000 | 1965000 |
| 17 | ಹಾಸನ | 2873975 | 2000189 | 2855611 | 2873975 | 2000189 | 2855611 |
| 18 | ಕಲಬುರಗಿ | 4008667 | 1468532 | 2297978 | 4008667 | 1468532 | 2297978 |
| 19 | ಕೆ.ಜಿ.ಎಫ್. | 281805 | 282137 | 482955 | 281805 | 282137 | 482955 |
| 20 | ಮಂಡ್ಯ | 1906231 | 1308875 | 2395629 | 1906231 | 1308875 | 2395629 |
| 21 | ಮೈಸೂರು | 14368000 | 4202000 | 8239000 | 14197000 | 4046000 | 7996000 |
| 22 | ರಾಯಚೂರು | 2388096 | 2328328 | 2406454 | 2388096 | 2328328 | 2406454 |
| 23 | ಭದ್ರಾವತಿ | 798828 | 785560 | 775837 | 798828 | 785560 | 775837 |
| 24 | ಶಿವಮೊಗ್ಗ | 1005641 | 2209715 | 2499410 | 1005641 | 2209715 | 2499410 |
| 25 | ತುಮಕೂರು | 0 | 2994527 | 3751946 | 0 | 2994527 | 3751946 |
| 26 | ಉಡುಪಿ | 4282632 | 3084933 | 2590354 | 4095455 | 2891464 | 2493092 |
| 27 | ವಿಜಯಪುರ | 5597000 | 4187000 | 7000000 | 5597000 | 4187000 | 7005000 |
| | ಮೊತ್ತ: | 482725262 | 337042088 | 247383294 | 468813154 | 330246400 | 239503913 |

ಆಯುಕ್ತರು

ಸಾರ್ವಜನಿಕ ಗ್ರಂಥಾಲಯ ಇಲಾಖೆ

ಬೆಂಗಳೂರು

ಅನುಬಂಧ – 5

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಅನ್ವಯಿಸುವ ಪುಸ್ತಕ ಆಯ್ಕೆ ಮತ್ತು ಖರೀದಿಗೆ ಸಂಬಂಧಿಸಿದ ಪರಿಷ್ಕರಿಸಿದ ಮಾರ್ಗಸೂಚಿಗಳು.

ಓದಲಾಗಿದೆ:

1) ದಿನಾಂಕ 26–9–1997ರ ಸರ್ಕಾರಿ ಆದೇಶ ಸಂಖ್ಯೆ: ಇಡಿ 3 ಎಲ್‌ಬಿಪಿ 94.
2) ದಿನಾಂಕ 15–10–2000ರ ಸರ್ಕಾರಿ ಆದೇಶ ಸಂಖ್ಯೆ: ಇಡಿ 4 ಎಲ್‌ಬಿಪಿ 99.
3) ದಿನಾಂಕ 4–11–2002ರ ಸರ್ಕಾರಿ ಸುತ್ತೋಲೆ ಸಂಖ್ಯೆ: ಇಡಿ 118 ಎಲ್‌ಬಿಪಿ 2002.
4) ದಿನಾಂಕ 12–2–2004ರ ಸರ್ಕಾರಿ ಸುತ್ತೋಲೆ ಸಂಖ್ಯೆ: ಇಡಿ 12 ಎಲ್‌ಬಿಪಿ 2003.
5) ದಿನಾಂಕ 21–2–2004ರ ಸರ್ಕಾರಿ ಆದೇಶ ಸಂಖ್ಯೆ: ಇಡಿ 1 ಎಲ್‌ಬಿಪಿ 2004.

– – – –

ಪ್ರಸ್ತಾವನೆ:

ಮೇಲೆ (1)ರಿಂದ (5)ರವರೆಗೆ ಓದಲಾದ ಸರ್ಕಾರಿ ಆದೇಶ ಹಾಗೂ ಸುತ್ತೋಲೆಗಳನ್ವಯ ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಅನ್ವಯಿಸುವ ಪುಸ್ತಕ ಆಯ್ಕೆ ಮತ್ತು ಖರೀದಿಯ ಕಾರ್ಯವಿಧಾನವನ್ನು ನಿಗದಿಪಡಿಸಲಾಗಿದೆ.

2) ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಗ್ರಂಥಾಲಯಗಳಲ್ಲಿ ಉತ್ತಮ ಮೌಲ್ಯದ ಗ್ರಂಥಗಳನ್ನು ಸಂಗ್ರಹಿಸಿಡುವ ಹಾಗೂ ಸಾರ್ವಜನಿಕ ಓದುಗರ ಅಭಿರುಚಿಗೆ ಅನುಸಾರವಾಗಿ ಗ್ರಂಥಗಳನ್ನು ಒದಗಿಸುವ ದೃಷ್ಟಿಯಿಂದ ಸದರಿ ಪುಸ್ತಕ ಆಯ್ಕೆ ಮತ್ತು ಖರೀದಿ ಕಾರ್ಯ ವಿಧಾನವನ್ನು ಸರ್ಕಾರ ಪುನರ್ ಅವಲೋಕಿಸಿ, ಅದನ್ನು ಪರಿಷ್ಕರಿಸುವುದು ಅಗತ್ಯವೆಂದು ಭಾವಿಸಿದೆ. ಆದರಂತೆ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಇಡಿ 1 ಎಲ್‌ಬಿಪಿ 2004, ಬೆಂಗಳೂರು, ದಿನಾಂಕ:07–02–2005

3) ಮೇಲೆ ವಿವರಿಸಿದ ಹಿನ್ನಲೆಯಲ್ಲಿ, ಮೇಲೆ (1)ರಿಂದ (5)ರಲ್ಲಿ ಓದಲಾದ ಸರ್ಕಾರದ ಆದೇಶ ಮತ್ತು ಸುತ್ತೋಲೆಗಳನ್ನು ರದ್ದುಪಡಿಸುತ್ತಾ, ಈ ಆದೇಶಕ್ಕೆ ಲಗತ್ತಿಸಿದ ಅನುಬಂಧ–1, ಅನುಬಂಧ–2 ಹಾಗೂ ಅನುಬಂಧ–3ರಲ್ಲಿ ಒಳಗೊಂಡಂತೆ ಪರಿಷ್ಕರಿಸಿದ

ಪ್ರಸ್ತುತ ಆಯ್ಕೆ ಮತ್ತು ಖರೀದಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ, ಈ ಮೂಲಕ ನಿಗದಿಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಂ.ಎಸ್.ಸೋಮಶೇಖರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.

ಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ಇವರಿಗೆ ಕಳುಹಿಸಿ, ಇದನ್ನು ಮುಂದಿನ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲು ಹಾಗೂ ಅದರ 1000 ಪ್ರತಿಗಳನ್ನು ಶಿಕ್ಷಣ ಇಲಾಖೆಯ ಗ್ರಂಥಾಲಯ ಶಾಖೆಗೆ ಒದಗಿಸಲು ಕೋರಿದೆ.

ಪ್ರತಿ:

1) ಮಹಾಲೇಖಪಾಲರು, ಕರ್ನಾಟಕ (ಎ ಮತ್ತು ಇ), ಬೆಂಗಳೂರು.
2) ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು.
3) ಎಲ್ಲಾ ಮುಖ್ಯಗ್ರಂಥಾಲಯಾಧಿಕಾರಿಗಳು (ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ ಇವರ ಮೂಲಕ.)
4) ನಿಯಂತ್ರಕರು, ರಾಜ್ಯ ಲೆಕ್ಕ ಪತ್ರ ಇಲಾಖೆ, ಬೆಂಗಳೂರು.
5) ಹೆಚ್ಚುವರಿ ಪ್ರತಿ/ ಶಾಖಾ ರಕ್ಷಾ ಕಡತ.

## ಅನುಬಂಧ–1

## (ದಿನಾಂಕ:07–02–2005ರ ಆದೇಶ ಸಂಖ್ಯೆ: ಇಡಿ 1 ಎಲ್‌ಬಿಪಿ 2004)

## ಪುಸ್ತಕ ಆಯ್ಕೆಯ ಕಾರ್ಯ ವಿಧಾನ:

1) ಪುಸ್ತಕ ಆಯ್ಕೆಗೆ ಸಂಬಂಧಿಸಿದ ಈ ಕಾರ್ಯವಿಧಾನ ಎಲ್ಲಾ ಭಾಷೆಯ ಪುಸ್ತಕಗಳ ಆಯ್ಕೆಗಾಗಿ ಅನ್ವಯಿಸತಕ್ಕದ್ದು.

2) ಸಾರ್ವಜನಿಕ ಗ್ರಂಥಾಲಯಗಳಿಗಾಗಿ ಪುಸ್ತಕಗಳನ್ನು ಆಯ್ಕೆ ಮಾಡಲು ರಾಜ್ಯ ಮಟ್ಟದಲ್ಲಿ ಪುಸ್ತಕ ಆಯ್ಕೆ ಸಮಿತಿ ಇರತಕ್ಕದ್ದು. ಆ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರುಗಳನ್ನು ರಾಜ್ಯ ಸರ್ಕಾರವು ಪ್ರತ್ಯೇಕ ಆದೇಶದ ಮೂಲಕ ನಾಮನಿರ್ದೇಶಿಸತಕ್ಕದ್ದು. ಈ ಸಮಿತಿಗೆ ಸಂಬಂಧಿಸಿದ ವಿವರಗಳನ್ನು, ಅಂದರೆ, ಅದರ ಸ್ವರೂಪ, ಕಾರ್ಯವ್ಯಾಪ್ತಿ, ಕಾಲಾವಧಿ, ಕಾರ್ಯಚಟುವಟಿಕೆ, ಇತ್ಯಾದಿಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

3) ಪುಸ್ತಕಗಳನ್ನು ಆಯ್ಕೆ ಮಾಡುವ ಬಗ್ಗೆ ವರ್ಷಕ್ಕೆ ಕನಿಷ್ಠ ಮೂರು ಬಾರಿಯಾದರೂ ರಾಜ್ಯದ ಎಲ್ಲಾ ಪ್ರಮುಖ ಕನ್ನಡ ಮತ್ತು ಆಂಗ್ಲ ಭಾಷೆಯ ದಿನ ಪತ್ರಿಕೆಗಳೂ ಒಳಗೊಂಡಂತೆ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟಣೆ/ಜಾಹಿರಾತು ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಇವರು ನೀಡಿ, ಆ ವರ್ಷದ ನಿರಂತರ ಆಯ್ಕೆ ವಿಷಯವು ಸಾರ್ವಜನಿಕರ ಗಮನಕ್ಕೆ ಬರುವಂತೆ ಮಾಡತಕ್ಕದ್ದು.

4) ಆಯ್ಕೆಗಾಗಿ ಪುಸ್ತಕಗಳನ್ನು ಸಲ್ಲಿಸುವ ಪ್ರಕಾಶಕರು/ಪುಸ್ತಕ ಮಾರಾಟಗಾರರು /ಸಂಘ ಸಂಸ್ಥೆಗಳು ಷಾಪ್ ಅಂಡ್ ಎಸ್ಟಾಬ್ಲಿಷ್‌ಮೆಂಟ್ ಕಾನೂನಿನ ಅಡಿಯಲ್ಲಿ ನೋಂದಾಯಿಸಿರಬೇಕು. ಅದಕ್ಕೆ ಸಂಬಂಧಿಸಿದ ನೋಂದಣಿ ಪತ್ರದ ಪ್ರತಿಯನ್ನು (ಕಾಲಕಾಲಕ್ಕೆ ನವೀಕರಿಸಿದ) ಅರ್ಜಿಯೊಡನೆ ಲಗತ್ತಿಸತಕ್ಕದ್ದು. ಈ ನಿಬಂಧನೆ ಲೇಖಕ–ಪ್ರಕಾಶಕರಿಗೆ ಅನ್ವಯಿಸುವುದಿಲ್ಲ.

5) ಪುಸ್ತಕಗಳನ್ನು ಆಯ್ಕೆಗಾಗಿ ಸಲ್ಲಿಸುವ ಮಾರಾಟ ಅಥವಾ ಪ್ರಕಾಶನ ಸಂಸ್ಥೆ ಸಂದರ್ಭಾನುಸಾರ ರಾಜ್ಯ/ಕೇಂದ್ರ ತೆರಿಗೆ ಇಲಾಖೆಯಿಂದ ನೊಂದಾಯಿತ ಸಂಸ್ಥೆಯಾಗಿರಬೇಕು. ಈ ನಿಬಂಧನೆ ಲೇಖಕಪ್ರಕಾಶಕರಿಗೆ ಅನ್ವಯಿಸುವುದಿಲ್ಲ.

6) ಮಂಜೂರಾದ ಆಯವ್ಯಯದಲ್ಲಿ ಪುಸ್ತಕ ಖರೀದಿಗಾಗಿ ನಿಗದಿಪಡಿಸಿದ ಮೊತ್ತದಲ್ಲಿ ಕನ್ನಡ ಪುಸ್ತಕಗಳಿಗೆ ಶೇ.80 ಹಾಗು ಇಂಗ್ಲೀಷ್ ಮತ್ತು

ಭಾರತೀಯ ಇತರ ಭಾಷೆಗಳ ಪುಸ್ತಕಗಳಿಗೆ ಶೇ.20ರಷ್ಟು ಹಣವನ್ನು ಖರೀದಿಸಲು ಅನುಕೂಲವಾಗುವಂತೆ ಪುಸ್ತಕಗಳ ಆಯ್ಕೆಯನ್ನು ಮಾಡುವುದು.

7) ಆಯ್ಕೆಗೆ ಸಲ್ಲಿಸುವ ಎಲ್ಲಾ ಭಾಷೆಗಳ ಪುಸ್ತಕಗಳ ಶೀರ್ಷಿಕೆಯು ವರ್ಷದಲ್ಲಿ ಪ್ರಥಮ ಮುದ್ರಣಗೊಂಡು, ಪ್ರಥಮ ಆವೃತ್ತಿಯಾಗಿ ಪ್ರಕಟಿತವಾಗಿರತಕ್ಕದ್ದು. ಆದರೆ, ಪರಿಷ್ಕೃತಗೊಂಡ ಆವೃತಿಯ ಗ್ರಂಥಗಳನ್ನು (revised editions) ಆಯ್ಕೆಗೆ ಪರಿಗಣಿಸಬಹುದು.

8) ಪುಸ್ತಕ ಆಯ್ಕೆಗಾಗಿ ಪುಸ್ತಕಗಳನ್ನು ಸಲ್ಲಿಸುವ ಸಂದರ್ಭದಲ್ಲಿ ಕರ್ನಾಟಕ ಮುದ್ರಣ ಮತ್ತು ನೋಂದಣಿ ಕಾನೂನು ಕಾಪಿರೈಟ್ ಕಾಯ್ದೆ ಮೇರೆಗೆ ಬೆಂಗಳೂರಿನ ರಾಜ್ಯ ಕೇಂದ್ರ ಗ್ರಂಥಾಲಯದ ಕಾಪಿ ರೈಟ್ ವಿಭಾಗದಲ್ಲಿ ಮೂರು ಪ್ರತಿಗಳನ್ನು ಉಚಿತವಾಗಿ ಸಲ್ಲಿಸಿ ನೊಂದಾಯಿಸತಕ್ಕದ್ದು. ಅಲ್ಲದೆ, ನೊಂದಣಿ ಪ್ರಮಾಣ ಪತ್ರದ ನಕಲು ಪ್ರತಿಯನ್ನು ಕಡ್ಡಾಯವಾಗಿ ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು.

9) ಪ್ರಥಮ ಮುದ್ರಣಗೊಂಡ ವರ್ಷದಿಂದ ಕನಿಷ್ಠ 10 ವರ್ಷಗಳ ಅವಧಿಯ ನಂತರ ಮರುಮುದ್ರಣಗೊಳ್ಳುವ ಉತ್ತಮ ಪುಸ್ತಕಗಳನ್ನು ಆಯ್ಕೆಗಾಗಿ ಪರಿಗಣಿಸಬಹುದು.

10) ಮೂವತ್ತು ಪುಟಗಳಿಗಿಂತ ಕಡಿಮೆ ಇರುವ ಯಾವ ಭಾಷೆಗಳ ಪುಸ್ತಕಗಳನ್ನು (ಮಕ್ಕಳ ಹಾಗೂ ನವಸಾಕ್ಷರ ಪುಸ್ತಕಗಳನ್ನು ಹೊರತುಪಡಿಸಿ) ಆಯ್ಕೆ ಮಾಡಬಾರದು.

11) ಗ್ರಾಮ ಪಂಚಾಯಿತಿ ಗ್ರಂಥಾಲಯಗಳಿಗೆ ಶೇಕಡ 90ರಷ್ಟು ಕನ್ನಡ ಪುಸ್ತಕಗಳನ್ನೇ ಆಯ್ಕೆ ಮಾಡಬೇಕು.

12) ಲೇಖಕರೇ ಪ್ರಕಾಶಕರಾಗಿರುವ ಸಂದರ್ಭದಲ್ಲಿ ಲೇಖಕರೇ ಅರ್ಜಿ ಸಲ್ಲಿಸಬೇಕು.

13) ಪುಸ್ತಕಗಳನ್ನು ಪ್ರಕಟಿಸುವ ಮೂಲ ಪ್ರಕಾಶಕರು ಅಥವಾ ಅವರ ಅನುಮತಿಯನ್ನು ಅಧಿಕೃತವಾಗಿ ಪಡೆದ ಪುಸ್ತಕ ವ್ಯಾಪಾರಿಗಳು ಮಾತ್ರ ಅರ್ಜಿ ಸಲ್ಲಿಸಬೇಕು.

14) ಮುದ್ರಣಕ್ಕೆ ಉತ್ತಮ ಕಾಗದ ಬಳಸಿರಬೇಕು. ನ್ಯೂಸ್‌ಪ್ರಿಂಟ್ ಅಥವಾ ಇತರ ಅಗ್ಗದ ಕಾಗದದಲ್ಲಿ ಮುದ್ರಿಸಿರುವ ಪುಸ್ತಕಗಳನ್ನು ಪರಿಗಣಿಸಕೂಡದು.

15) ಪುಸ್ತಕದ ಒಳ ಎರಡನೇ ಪುಟದಲ್ಲಿ (ಶೀರ್ಷಿಕೆ ಪುಟದ ಹಿಂಬದಿಯಲ್ಲಿ) ಕಡ್ಡಾಯವಾಗಿ ಗ್ರಂಥದ ಶೀರ್ಷಿಕೆ, ಲೇಖಕರ ಹೆಸರು, ಪ್ರಕಾಶಕರ ಹೆಸರು, ಒಟ್ಟು ಪುಟಗಳ (ಮುಖಪುಟಗಳೂ ಸೇರಿದಂತೆ) ಸಂಖ್ಯೆ, ಪ್ರಕಟಣೆಯ ವರ್ಷ, ಮಾರಾಟ ಬೆಲೆ ಹಾಗೂ ಮರು ಮುದ್ರಣದ (ಮರು ಮುದ್ರಣ ಆಗಿದ್ದರೆ) ವಿವರಗಳನ್ನು ಮುದ್ರಿಸಿರಬೇಕು. ಪುಸ್ತಕದ ಮೇಲೆ ಬೆಲೆಗಳು ಮುದ್ರಿತವಾಗಿದ್ದು, ಎದ್ದು ಕಾಣುವಂತಿರಬೇಕು. ಸೀಸದ ಕಡ್ಡಿಯಿಂದ ಬರೆಯಲಾದ, ರಬ್ಬರ್ ಸ್ಟ್ಯಾಂಪ್‌ನಿಂದ ಮುದ್ರಿಸಲಾದ ಅಥವಾ ಬೇರೆಯಾಗಿ ಅಂಟಿಸಲಾದ ಬೆಲೆಗಳಿದ್ದಲ್ಲಿ ಅಂತಹ ಪುಸ್ತಕಗಳನ್ನು ಆಯ್ಕೆಮಾಡದೇ ತಿರಸ್ಕರಿಸಬೇಕು. ಆದರೆ ಅಂಥಹ ಪುಸ್ತಕಗಳನ್ನು ಆಯ್ಕೆಗಾಗಿ ಪರಿಗಣಿಸುವಾಗ ಅತ್ಯಂತ ಅಗತ್ಯವೆಂದು ಸಮಿತಿಗೆ ಕಂಡು ಬಂದಲ್ಲಿ ಸಮಿತಿಯು ಅದರ ಬೆಲೆಯನ್ನು ನಿಗದಿತ ಕಾರ್ಯ ವಿಧಾನದ ಪ್ರಕಾರ ನಿಗದಿ ಪಡಿಸತಕ್ಕದ್ದು. ಅಗತ್ಯವಿದ್ದಲ್ಲಿ, ಪ್ರಕಾಶಕರ ಮುದ್ರಿತ ಬೆಲೆ ಪಟ್ಟಿಯನ್ನು ಗಮನಿಸಿ ಬೆಲೆ ನಿಗದಿ ಪಡಿಸತಕ್ಕದ್ದು. ಅಲ್ಲದೆ, ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಗ್ರಂಥಾಲಯಗಳನ್ನು ಹೊರತುಪಡಿಸಿ, ಶಾಲಾ ಕಾಲೇಜುಗಳು, ಸಾರ್ವಜನಿಕ ಸಂಸ್ಥೆಗಳು ಮುಂತಾದ ಬೇರೆ ಖರೀದಿದಾರರಿಗೂ ಸಹ ಮೊಹರಿನಿಂದ ನಮೂದಿಸಿದ ಅಥವಾ ಚೀಟಿ ಅಂಟಿಸುವ ಮೂಲಕ ನಮೂದಿಸಿದ ಪರಿಷ್ಕೃತ ದರಕ್ಕೆ ತಾವು ಈ ಪುಸ್ತಕಗಳನ್ನು ಮಾರಾಟ ಮಾಡುತ್ತಿಲ್ಲ ಎಂಬುದಾಗಿ ಲಿಖಿತವಾಗಿ ಹೇಳಿಕೆ ನೀಡತಕ್ಕದ್ದು. ಅಂತಹ ಹೇಳಿಕೆ ಏನಾದರೂ ವಾಸ್ತವವಲ್ಲದ ಅಥವಾ ತಪ್ಪಾಗಿರುವ ಹೇಳಿಕೆ ಎಂಬುದಾಗಿ ಕಂಡು ಬಂದಲ್ಲಿ ಅಂತಹ ಪುಸ್ತಕಗಳ ಖರೀದಿಗೆ ತಮಗೆ ಸಂದಾಯವಾಗಿರುವ ಅಥವಾ ಸಂದಾಯವಾಗಬೇಕಾಗಿರುವ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳತಕ್ಕದ್ದು. ಅಷ್ಟೇ ಅಲ್ಲದೆ, ಸರ್ಕಾರದ ಇಲಾಖೆಗಳಿಗೆ ಅಥವಾ ಸರ್ಕಾರದ ನಿಯಂತ್ರಣದಲ್ಲಿ ಬರುವ ಯಾವುದೇ ಸಂಸ್ಥೆಗೆ, ಸ್ವಾಯುತ್ತ ಸಂಸ್ಥೆಗೆ, ಶಿಕ್ಷಣ ಸಂಸ್ಥೆಗೆ ಮುಂತಾದುವುಗಳಿಗೆ ಪುಸ್ತಕ ಸರಬರಾಜು ಮಾಡುವ ವಿಷಯದಲ್ಲಿ ಕಪ್ಪು ಪಟ್ಟಿಗೆ ಸೇರಿಸಲ್ಪಡಲು ತಾನು ಬದ್ಧನು ಎಂಬ ಮುಚ್ಚಳಿಕೆಯನ್ನು ಪುಸ್ತಕಗಳ ಆಯ್ಕೆಗೆ ಸಲ್ಲಿಸುವಾಗ ಬರೆದುಕೊಡತಕ್ಕದ್ದು.

16) ಪುಸ್ತಕದ ಆಯ್ಕೆ ಹಾಗೂ ಅವುಗಳ ಬೆಲೆ ನಿಗದಿ ವಿಷಯದಲ್ಲಿ ಸಮಿತಿಯ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

17) ಅಗತ್ಯ ಕಂಡು ಬಂದಲ್ಲಿ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯು ರಾಜ್ಯದಲ್ಲಿ ನಡೆಯುವ ಪುಸ್ತಕ ಪ್ರದರ್ಶನಗಳಿಗೆ ಭೇಟಿ ನೀಡಿ ಪುಸ್ತಕಗಳನ್ನು ಆಯ್ಕೆ ಮಾಡಬಹುದು.

18) ರಾಜ್ಯ ಕೇಂದ್ರ ಗ್ರಂಥಾಲಯ ಹಾಗೂ ಇಂದಿರಾ ಪ್ರಿಯದರ್ಶಿನಿ ಮಕ್ಕಳ ಗ್ರಂಥಾಲಯ ಹಾಗೂ ಪೀಣ್ಯದಲ್ಲಿರುವ ತಾಂತ್ರಿಕ ಗ್ರಂಥಾಲಯಗಳು ಪರಾಮರ್ಶನ (reference) ಗ್ರಂಥಾಲಯಗಳು ಆಗಿರುವುದರಿಂದ, ಮೇಲೆ (ಕಂಡಿಕೆ 6ರಲ್ಲಿ) ಹೇಳಿದ ಶೇಕಡವಾರು ಅವುಗಳಿಗೆ ಅನ್ವಯಿಸುವುದಿಲ್ಲ.

19) ಗ್ರಂಥಗಳನ್ನು ಖರೀದಿಸಲು ಆಯ್ಕೆ ಮಾಡುವಾಗ ಗ್ರಂಥಗಳಲ್ಲಿ ಅಡಕವಾಗಿರುವ ವಿಷಯ ಕ್ರಮಬದ್ಧವಾಗಿದ್ದು, ಪುಟಗಳು, ರಟ್ಟು ಕಟ್ಟುವಿಕೆ ಹಾಗೂ ಗ್ರಂಥಗಳ ಇನ್ನಿತರ ಬಾಹ್ಯ ರಚನೆಯನ್ನು ಸಹ ಗಮನದಲ್ಲಿಟ್ಟುಕೊಳ್ಳಬೇಕು. ಯಾವುದೇ ಪುಸ್ತಕದ ಕ್ಯಾಲಿಕೋ ಪ್ರತಿಗಳು ಲಭ್ಯವಿಲ್ಲದಿದ್ದಲ್ಲಿ ಮಾತ್ರ ಸಾದಾ ಪ್ರತಿಗಳನ್ನು ಖರೀದಿಸತಕ್ಕದ್ದು.

20) ಜ್ಞಾನಪೀಠ, ಕೇಂದ್ರ ಸಾಹಿತ್ಯ ಅಕಾಡೆಮಿಗಳಿಂದ ಪ್ರಶಸ್ತಿ ಪಡೆದು ಭಾಷಾಂತರಗೊಂಡ ಗ್ರಂಥಗಳನ್ನು, ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಕೇಂದ್ರ/ರಾಜ್ಯ ಸಾಹಿತ್ಯ ಅಕಾಡೆಮಿಗಳಿಂದ ಪ್ರಶಸ್ತಿಗಳಿಸಿದ ಪುಸ್ತಕಗಳು ಹಾಗೂ ನ್ಯಾಷನಲ್ ಬುಕ್ ಟ್ರಸ್ಟ್ ಮತ್ತು ಇತರ ಸರ್ಕಾರಿ ಸಂಸ್ಥೆಗಳು ಪ್ರಕಟಿಸಿರುವಂತಹ ಪುಸ್ತಕಗಳನ್ನು ಖರೀದಿಸಲು ಪ್ರಸ್ತುತ ಆಯ್ಕೆ ಪ್ರಕ್ರಿಯೆಗೆ ಒಳಪಡುವುದಿಲ್ಲ, ಹಾಗಾಗಿ ಅವುಗಳನ್ನು ರಾಜ್ಯ ಕೇಂದ್ರ ಗ್ರಂಥಾಲಯಕ್ಕೆ ಸಂಬಂಧಿಸಿದಂತೆ ನಿರ್ದೇಶಕರು ಮತ್ತು ಉಳಿದ ನಗರ/ಜಿಲ್ಲಾ ಗ್ರಂಥಾಲಯಗಳಿಗೆ ಸಂಬಂಧಿಸಿದಂತೆ, ಆಯಾಯ ಮುಖ್ಯ ಗ್ರಂಥಾಲಯಾಧಿಕಾರಿಗಳು ನೇರವಾಗಿ ಖರೀದಿಸಬಹುದು.

21) ಪಾರದರ್ಶಕತೆಯ ದೃಷ್ಟಿಯಿಂದ ಸಮಿತಿಯು ಯಾವುದೇ ಪುಸ್ತಕವನ್ನು ಆಯ್ಕೆ ಮಾಡದೇ ಇದ್ದಲ್ಲಿ ಅದಕ್ಕೆ ಕಾರಣವನ್ನು ದಾಖಲಿಸತಕ್ಕದ್ದು.

– 0 – 0 – 0 –

# ಅನುಬಂಧ-2

**(ದಿನಾಂಕ:07-02-2005ರ ಆದೇಶ ಸಂಖ್ಯೆ: ಇಡಿ 1 ಎಲ್‌ಬಿಪಿ 2004)**

**ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯ ಸ್ವರೂಪ ಮತ್ತು ಕಾರ್ಯವ್ಯಾಪ್ತಿ**

(1) ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯು, ಅನುಬಂಧ-1ರಲ್ಲಿ ಒಳಗೊಂಡ ಕಾರ್ಯವಿಧಾನ ಹಾಗೂ ಷರತ್ತು ಮತ್ತು ನಿಬಂಧನೆಗಳನ್ನು ಪಾಲಿಸತಕ್ಕದ್ದು.

(2) **ಸಮಿತಿಯ ವ್ಯಾಪ್ತಿ:**

ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯು ಈ ಕೆಳಕಂಡ ಪುಸ್ತಕಗಳನ್ನು ಆಯ್ಕೆ ಮಾಡತಕ್ಕದ್ದು:-

ಅ) ರಾಜ್ಯ ಕೇಂದ್ರ ಗ್ರಂಥಾಲಯಕ್ಕೆ ಬೇಕಾಗುವ ಪುಸ್ತಕಗಳು.

ಆ) ಸಾರ್ವಜನಿಕ ಗ್ರಂಥಾಲಯ ಇಲಾಖೆಯಡಿ ಬರುವ ಜಿಲ್ಲಾ ಕೇಂದ್ರ ಗ್ರಂಥಾಲಯ ಹಾಗೂ ನಗರ ಕೇಂದ್ರ ಗ್ರಂಥಾಲಯಗಳಿಗಾಗಿ ಬೇಕಾಗುವ ಪುಸ್ತಕಗಳು.

ಇ) ರಾಜಾರಾಂ ಮೋಹನ್ ರಾಯ್ ಗ್ರಂಥಾಲಯ ಪ್ರತಿಷ್ಠಾನ (ಆರ್.ಆರ್.ಎಲ್.ಎಫ್) ಯೋಜನೆಯಡಿಯಲ್ಲಿ ಖರೀದಿಸುವ ಪುಸ್ತಕಗಳು

ಈ) ಗ್ರಾಮ ಪಂಚಾಯ್ತಿ ಗ್ರಂಥಾಲಯಗಳಿಗೆ ಬೇಕಾಗುವ ಪುಸ್ತಕಗಳು.

(3) **ಸಮಿತಿಯ ಸ್ವರೂಪ**

1) ಅಧ್ಯಕ್ಷರು - ಶಿಕ್ಷಣ/ಸಾಹಿತ್ಯ ಕ್ಷೇತ್ರದ ಖ್ಯಾತ ವ್ಯಕ್ತಿಗಳು. (ಸರದಿಯ ಪ್ರಕಾರ ರಾಜ್ಯ ನಾಲ್ಕು ಕಂದಾಯ ವಿಭಾಗಗಳಿಂದ).

2) ಸದಸ್ಯರು - 5 - ರಾಜ್ಯದ 4 ಕಂದಾಯ ವಿಭಾಗಗಳಿಂದ ನಾಲ್ವರು ಹಾಗೂ ಬೆಂಗಳೂರು ನಗರದಿಂದ ಒಬ್ಬರು ಸೇರಿದಂತೆ ಆಯ್ದ ಪ್ರಖ್ಯಾತ ದಲಿತ ಸಾಹಿತಿಗಳು, ಯುವ ಲೇಖಕರು ಹಾಗೂ ಶಿಕ್ಷಣ ತಜ್ಞರು.

3) ಮಹಿಳಾ ಸದಸ್ಯರು - ಸಾಹಿತಿಗಳು/ಶಿಕ್ಷಣ ತಜ್ಞರು (ಇಬ್ಬರು) (ಒಬ್ಬರು ಮೈಸೂರು-ಬೆಂಗಳೂರು ವಿಭಾಗದಿಂದ, ಮತ್ತೊಬ್ಬರು ಬೆಳಗಾಂ-ಗುಲ್ಬರ್ಗಾ ವಿಭಾಗದಿಂದ)

4) ವಿಜ್ಞಾನ ಕ್ಷೇತ್ರದ ಒಬ್ಬ ತಜ್ಞರು (ಸರದಿಯ ಪ್ರಕಾರ ಕಂದಾಯ ವಿಭಾಗಗಳಿಂದ)

5) ಮಾನವಿಕ ಶಾಸ್ತ್ರದ ಒಬ್ಬ ತಜ್ಞರು (ಸರದಿಯ ಪ್ರಕಾರ ಕಂದಾಯ ವಿಭಾಗಗಳಿಂದ)

6) ಮಕ್ಕಳ ಸಾಹಿತ್ಯ ಕ್ಷೇತ್ರದ ಒಬ್ಬ ತಜ್ಞರು (ಸರದಿಯ ಪ್ರಕಾರ ಕಂದಾಯ ವಿಭಾಗಗಳಿಂದ)

7) ಗ್ರಂಥಾಲಯ ವಿಜ್ಞಾನದ ಒಬ್ಬ ತಜ್ಞರು (ಸರದಿಯ ಪ್ರಕಾರ ಕಂದಾಯ ವಿಭಾಗಗಳಿಂದ)

8) ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ ಅಥವಾ ಅವರಿಂದ ನಾಮನಿರ್ದೇಶನಗೊಂಡ ಪ್ರಾಧಿಕಾರದ ಒಬ್ಬ ಸದಸ್ಯರು.

9) ಪುಸ್ತಕ ಪ್ರಕಾಶಕರ/ಮಾರಾಟಗಾರರ ಸಂಘದ ಒಬ್ಬ ಪ್ರತಿನಿಧಿ (ಸರದಿಯ ಪ್ರಕಾರ ಕಂದಾಯ ವಿಭಾಗಗಳಿಂದ)

10) ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು ಅಥವಾ ಅವರಿಂದ ನಾಮನಿರ್ದೇಶಿತ ಒಬ್ಬ ಕಾರ್ಯದರ್ಶಿ/ವ್ಯಕ್ತಿ.

11) ರಾಜ್ಯದ ವಿಶ್ವವಿದ್ಯಾನಿಲಯಗಳ ಪ್ರಸರಾಂಗಗಳ ನಿರ್ದೇಶಕರು (ಸರದಿಯ ಪ್ರಕಾರ)

12) ಅಧ್ಯಕ್ಷರು, ಕರ್ನಾಟಕ ವಿಜ್ಞಾನ ಪರಿಷತ್ ಅಥವಾ ಅವರಿಂದ ನಾಮ ನಿರ್ದೇಶಿತ ಒಬ್ಬ ಕಾರ್ಯದರ್ಶಿ ಅಥವಾ ವ್ಯಕ್ತಿ.

13) ರಾಜ್ಯ ಗ್ರಂಥಾಲಯ ಪ್ರಾಧಿಕಾರದಿಂದ ನಾಮನಿರ್ದೇಶನಗೊಂಡ ಒಬ್ಬ ಸದಸ್ಯರು (ಸರದಿಯ ಪ್ರಕಾರ)

14) ಅಖಿಲ ಭಾರತ ಪ್ರಕಾಶಕರ ಸಂಘದ ಮಾನ್ಯತೆ ಪಡೆದ ಕರ್ನಾಟಕ ಪ್ರಕಾಶಕರ ಸಂಘದ ಒಬ್ಬ ಪ್ರತಿನಿಧಿ.

15) ಕನ್ನಡ ಮತ್ತು ಆಂಗ್ಲ ಭಾಷೆಯ ಪುಸ್ತಕಗಳನ್ನು ಹೊರತುಪಡಿಸಿ ಇತರೆ ಭಾರತೀಯ ಭಾಷೆಯ ಪುಸ್ತಕಗಳನ್ನು ಆಯ್ಕೆ ಮಾಡಲು ಆಯಾಯಾ ಭಾಷೆಯ ಭಾಷಾ/ವಿಷಯ ಪರಿಣಿತರನ್ನು ಕೋ-ಆಪ್ಟ್ ಮಾಡಿಕೊಳ್ಳುವುದು.

16) ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ – ಸದಸ್ಯ ಕಾರ್ಯದರ್ಶಿ

(4) <u>ಸಮಿತಿಯ ಕಾಲಾವಧಿ:</u>

ಸಮಿತಿಯನ್ನು ರಚಿಸಿ ಆದೇಶವನ್ನು ಹೊರಡಿಸಿದ ದಿನಾಂಕದಿಂದ 2 ವರ್ಷಗಳ ಅವಧಿಗೆ ಅಥವಾ ಮುಂದಿನ ಸಮಿತಿ ಅಸ್ತಿತ್ವಕ್ಕೆ ಬರುವವರೆಗೆ ಇವರಡರಲ್ಲಿ ಯಾವುದು ನಂತರವೋ ಅಲ್ಲಿಯವರೆಗೆ ಇರುತ್ತದೆ.

(5) <u>ಪುಸ್ತಕ ಬೆಲೆ ನಿಗದಿ ಸಮಿತಿ:</u>

(ಅ) ಆಯ್ಕೆಯಾದ ಪ್ರತಿಯೊಂದು ಪುಸ್ತಕವು ಬೆಲೆ ನಿಗದಿಪಡಿಸುವ ಉಪಸಮಿತಿಯ ಪರಿಶೀಲನೆಗೆ ಒಳಪಡುತ್ತದೆ.

(ಆ) ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿ ಅಧ್ಯಕ್ಷರೂ ಸೇರಿದಂತೆ, ಲೇಖಕರು, ಪ್ರಕಾಶಕರು ಹಾಗೂ ಮುದ್ರಣ ಇಲಾಖೆ ಪ್ರತಿನಿಧಿಗಳನ್ನು ಒಳಗೊಂಡಂತೆ ಸದರಿ ಉಪಸಮಿತಿಯನ್ನು ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿ ರಚಿಸಿಕೊಳ್ಳತಕ್ಕದ್ದು.

(ಇ) ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯ ಅಧ್ಯಕ್ಷರೇ ಈ ಉಪ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸತಕ್ಕದ್ದು. ಗ್ರಂಥಾಲಯ ಇಲಾಖೆ ನಿರ್ದೇಶಕರು ಇದರ ಕಾರ್ಯದರ್ಶಿ ಆಗಿರತಕ್ಕದ್ದು. ಈ ಉಪ ಸಮಿತಿಗೆ ಸರ್ಕಾರಿ ಮುದ್ರಣಾಲಯದ ನಿರ್ದೇಶಕರನ್ನು ಅಥವಾ ಉಪ ನಿರ್ದೇಶಕರನ್ನು ತಾಂತ್ರಿಕ ಸಲಹೆಗಾರರನ್ನಾಗಿ ಆಹ್ವಾನಿಸ ತಕ್ಕದ್ದು. ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯ ಇಬ್ಬರು ಸದಸ್ಯರು ಈ ಉಪಸಮಿತಿಯ ಸದಸ್ಯರಾಗಿರತಕ್ಕದ್ದು. ಅದೇ ರೀತಿಯಲ್ಲಿ ವೈಜ್ಞಾನಿಕ, ವೈದ್ಯಕೀಯ, ಕಾನೂನು ಮಾನವ ಶಾಸ್ತ್ರಗಳು ಮುಂತಾದ ವಿಶಿಷ್ಟ ವಿಷಯಗಳ ಬಗ್ಗೆ ಪುಸ್ತಕಗಳನ್ನು ಆಯ್ಕೆ ಮಾಡುವಾಗ ಸಮಿತಿಯು ಆಯಾ ಕ್ಷೇತ್ರಗಳಲ್ಲಿ ಪರಿಣಿತರಾದವರೊಬ್ಬರನ್ನು ಕೋ-ಆಪ್ಟ್ ಮಾಡಿಕೊಳ್ಳತಕ್ಕದ್ದು.

(ಈ) ಸದರಿ ಉಪಸಮಿತಿಯು ಖರೀದಿ ಬೆಲೆಯನ್ನು ನಿಗದಿಪಡಿಸುವಾಗ, ಗ್ರಂಥದ ಸತ್ವ ಹಾಗೂ ಮೌಲಿಕತೆ ಜೊತೆಗೆ ಅದಕ್ಕೆ ಉಪಯೋಗಿಸುವ ಕಾಗದದ ಜಿ.ಎಸ್.ಎಂ. ಹಾಗೂ ಗುಣಮಟ್ಟ (ಸಾಮಾನ್ಯ ಕಾಗದ, ಮ್ಯಾಫ್‌ಲಿಥೋ ಕಾಗದ ಇತ್ಯಾದಿ), ಮುದ್ರಣದ ಗುಣಮಟ್ಟ ಹೊದಿಕೆಯ ಸ್ವರೂಪ (ಒಂದು ಬಣ್ಣ, ಎರಡು ಬಣ್ಣ ಇತ್ಯಾದಿ) ಮತ್ತು ಬಳಸಿದ ಕಾಗದ (ಲ್ಯಾಮಿನೇಷನ್ ಇತ್ಯಾದಿ), ಬೈಂಡಿಂಗ್ (ಪಿನ್ನಿಂಗ್ ಸೆಕ್ಷನ್ ಸ್ಟಿಚ್ಚಿಂಗ್ ಇತ್ಯಾದಿ) ಒಳಪುಟಗಳಲ್ಲಿ ಉಪಯೋಗಿಸಲಾದ ಚಿತ್ರಗಳು ಇತ್ಯಾದಿಗಳನ್ನು ಗಮನಿಸಬೇಕು.

(6) ಬೆಲೆಯ ನಿಗಧಿ ಬಗ್ಗೆ ಮೇಲ್ಮನವಿ: ಬೆಲೆ ನಿಗದಿಪಡಿಸುವ ಉಪಸಮಿತಿಯು ಬೆಲೆ ನಿಗದಿಯಿಂದ ಬಾಧಿತರಾದವರು ರಾಜ್ಯ ಮಟ್ಟದ ಸಮಿತಿಗೆ ಮೇಲ್ಮನವಿ

ಸಲ್ಲಿಸಬಹುದು. ಅಂತಹ ಮೇಲ್ಮನವಿಯನ್ನು ಆಯ್ಕೆ ಪಟ್ಟಿ ಪ್ರಕಟವಾದ 15 ದಿವಸಗಳೊಳಗಾಗಿ ಸಲ್ಲಿಸತಕ್ಕದ್ದು. ಅದರ ಕುರಿತು ರಾಜ್ಯ ಮಟ್ಟದ ಸಮಿತಿಯ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆ.

– 0 – 0 – 0 –

## ಅನುಬಂಧ-[illegible]

(ದಿನಾಂಕ:07-02-2005ರ ಆದೇಶ ಸಂಖ್ಯೆ [illegible])

## ಪುಸ್ತಕ ಖರೀದಿ ವಿಧಾನಗಳು

1. ಪುಸ್ತಕ ಆಯ್ಕೆ ಸಮಿತಿ ಆಯ್ಕೆ ಮಾಡಿದ ಪುಸ್ತಕಗಳನ್ನು [illegible] ಆಯ್ಕೆಯಾದ ಪುಸ್ತಕಗಳನ್ನು ಪಟ್ಟಿ ಬಿಡುಗಡೆ ಆದ ದಿನಾಂಕದಿಂದ ಎರಡು [illegible] ಮಾತ್ರ ಖರೀದಿಸಬಹುದು.
2. ಪುಸ್ತಕಗಳನ್ನು ಖರೀದಿಸುವಾಗ, ಆಯಾ ಜಿಲ್ಲಾ/ನಗರ/ಕೇಂದ್ರ ಗ್ರಂಥಾಲಯಗಳ ಆಯವ್ಯಯದಲ್ಲಿ ಪುಸ್ತಕ ಖರೀದಿಗೆ ಮಂಜೂರಾದ ಮೊತ್ತದಲ್ಲಿ ಕನ್ನಡ ಪುಸ್ತಕಗಳಿಗೆ [illegible] ಶೇ.80, ಇಂಗ್ಲೀಷ್ ಮತ್ತು ಭಾರತೀಯ ಇತರ ಭಾಷಾ ಪುಸ್ತಕಗಳಿಗೆ ಶೇ.20ರಂತೆ ಖರೀದಿಸಲು ಬಳಸತಕ್ಕದ್ದು.
3. ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ಈ ಕೆಳಕಂಡ ಮೂರು ಹಂತದಲ್ಲಿ ಪುಸ್ತಕ ಖರೀದಿ ಪ್ರಕ್ರಿಯೆಯನ್ನು ಕಾರ್ಯಗತಗೊಳಿಸತಕ್ಕದ್ದು:-

   ಅ) ಆಯ್ಕೆ ಸಮಿತಿಯಿಂದ ಆಯ್ಕೆಯಾದ ಪುಸ್ತಕಗಳ ಪೈಕಿ ಯಾವ ಪುಸ್ತಕಗಳನ್ನು ಖರೀದಿಸಬೇಕೆಂಬ ಬಗ್ಗೆ ಹಣಕಾಸಿನ ಲಭ್ಯತೆಗೆ ಒಳಪಟ್ಟು ತೀರ್ಮಾನಿಸಲು ಆಯಾ ಜಿಲ್ಲಾ/ನಗರ ಗ್ರಂಥಾಲಯ ಪ್ರಾಧಿಕಾರಗಳೇ ಅಂತಿಮ ಅಧಿಕಾರ ಹೊಂದಿರುತ್ತವೆ.

   ಆ) ಇಲಾಖೆಯ, ಜಿಲ್ಲಾ ಹಾಗೂ ನಗರ ಕೇಂದ್ರ ಗ್ರಂಥಾಲಯಗಳ ಆಯವ್ಯಯದಲ್ಲಿ ಪುಸ್ತಕ ಖರೀದಿಗೆ ಮಂಜೂರಾದ ಮೊತ್ತದಲ್ಲಿ ಶೇ.80ರಷ್ಟು (ಎಂಭತ್ತು) ಮೊತ್ತವನ್ನು ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಯಾದ ಪುಸ್ತಕಗಳನ್ನು ಖರೀದಿಸಲು ಮೀಸಲಿಡತಕ್ಕದ್ದು.

   ಇ) ಆಯಾ ಜಿಲ್ಲೆಯ ಸ್ಥಳೀಯ ಲೇಖಕರು, ಲೇಖಕ ಪ್ರಕಾಶಕರು ಮತ್ತು ಪ್ರಕಾಶಕರ ಪುಸ್ತಕಗಳನ್ನು ಮಾತ್ರ ಶೇ.10ರಷ್ಟು ಮೊತ್ತಕ್ಕೆ ಆಯಾ ಜಿಲ್ಲಾ/ನಗರ ಪ್ರಾಧಿಕಾರ ಆಯ್ಕೆಮಾಡಿ ಖರೀದಿಸಬಹುದು.

 [redacted]

[illegible] ಗ್ರಂಥಾಲಯದ ಓದುಗರ ಬೇಡಿಕೆಯ ಪ್ರಕಾರ ಪುಸ್ತಕಗಳನ್ನು ಖರೀದಿಸಲು [illegible] ಆಯುಕ್ತ [illegible] ಜಿಲ್ಲಾ/ನಗರ ಮುಖ್ಯ ಗ್ರಂಥಾಲಯಾಧಿಕಾರಿಯವರ [illegible]ಯಲ್ಲಿ ಖರೀದಿಸಬಹುದು. ಯಾವುದೇ ಭಾಷೆಯ ಯಾವುದೇ ಪ್ರಕಾರದ ಪುಸ್ತಕಗಳನ್ನು ಈ ವಿವೇಚನಾ ಕೋಟಾದಲ್ಲಿ ಖರೀದಿಸಬಹುದು. ಆದರೆ, ಬೆಂಗಳೂರು ನಗರ ಗ್ರಂಥಾಲಯ ಪ್ರಾಧಿಕಾರದ ವ್ಯಾಪ್ತಿಯೊಳಗೆ ಬರುವ ಮುಖ್ಯ ಗ್ರಂಥಾಲಯಾಧಿಕಾರಿಗಳಿಗೆ ಸಂಬಂಧಿಸಿದಂತೆ, ಈ ವಿವೇಚನಾ ಕೋಟಾ [illegible] ಕೇವಲ ಶೇ.5ಕ್ಕೆ ಸೀಮಿತಗೊಳಿಸಿ ನಿಗದಿಪಡಿಸಿದೆ ಮತ್ತು ನಗರ ಗ್ರಂಥಾಲಯ ಪ್ರಾಧಿಕಾರವು ಶೇಕಡ 15ರಷ್ಟು ಮೊತ್ತಕ್ಕೆ ಖರೀದಿಸುವ ಅಧಿಕಾರ ಹೊಂದಿರುತ್ತದೆ.

4. ಗ್ರಂಥಾಲಯಕ್ಕೆ ಬರುವ ಓದುಗರ ದೃಷ್ಟಿಯಿಂದ ಗ್ರಂಥಾಲಯದಲ್ಲಿ ಪುಸ್ತಕಗಳನ್ನು ಸಂಗ್ರಹಿಸುವಾಗ ಎಲ್ಲಾ ಪ್ರಕಾರಗಳು ಇರುವಂತೆ ಕ್ರಮ ಕೈಗೊಳ್ಳಲು ಈ ಕೆಳಕಂಡ ಶೇಕಡಾವಾರು ಪ್ರಮಾಣದಲ್ಲಿ ಖರೀದಿ ಮಾಡತಕ್ಕದ್ದು.

| | |
|---|---|
| 1. ಸಾಹಿತ್ಯ | ಶೇ. 40 |
| 2. ಮಕ್ಕಳ ಸಾಹಿತ್ಯ | ಶೇ. 10 |
| 3. ಕಲೆ (ಕ್ರೀಡಾ ಸಾಹಿತ್ಯ ಒಳಗೊಂಡಂತೆ) | ಶೇ. 10 |
| 4. ವಿಜ್ಞಾನ, ವೃತ್ತಿ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಆದಾಯ ಉತ್ಪಾದನಾ ಯೋಜನೆ | ಶೇ. 10 |
| 5. ಸ್ಪರ್ಧಾತ್ಮಕ | ಶೇ. 10 |
| 6. ಪಠ್ಯ ಪುಸ್ತಕ | ಶೇ. 10 |
| 7. ಸಾಂದರ್ಭಿಕ ಮತ್ತು ಪರಾಮರ್ಶನ | ಶೇ. 10 |

ಆದರೆ, ಒಂದೊಮ್ಮೆ ಯಾವುದೇ ಪ್ರಕಾರದ ಗ್ರಂಥಗಳು ಸದರಿ ಶೇಕಡಾವಾರಿನ ಪ್ರಕಾರ ಲಭ್ಯವಿಲ್ಲದಿದ್ದಲ್ಲಿ ಹಾಗೂ ಖರೀದಿ ನಂತರ ಹಣ ಉಳಿದಲ್ಲಿ, ಅವಶ್ಯಕತೆ ಇರುವ ಇತರೇ ಪ್ರಕಾರದ ಪುಸ್ತಕಗಳನ್ನು ಖರೀದಿಸಲು ವಿನಿಯೋಗಿಸಬಹುದು.

5. ಜಿಲ್ಲಾ/ನಗರ ಕೇಂದ್ರ ಗ್ರಂಥಾಲಯಗಳಿಗೆ ಯಾವುದೇ ಭಾಷೆಯ ಪುಸ್ತಕಗಳನ್ನು (ವಿದೇಶಿ ಪುಸ್ತಕಗಳೂ ಸೇರಿದಂತೆ) ಖರೀದಿಸುವಾಗ ಕನಿಷ್ಠ ಶೇ.15 ರಂತೆ ಸೋಡಿಯನ್ನು (ಡಿಸ್ಕೌಂಟ್) ಆಯ್ಕೆ ಸಮಿತಿ ನಿರ್ಣಯಿಸಿದ ನಿವ್ವಳ ಬೆಲೆಯ ಮೇಲೆ

ಪಡೆಯತಕ್ಕದ್ದು. ಶೇ.15ಕ್ಕಿಂತ ಹೆಚ್ಚಿನ ಸೋಡಿಯನ್ನು ನೀಡಲು ಮುಂದೆ ಬಂದಲ್ಲಿ, ಒಪ್ಪಬಹುದು.

6. ಹೊರದೇಶದ ಪುಸ್ತಕಗಳನ್ನು ಖರೀದಿಸುವಾಗ ಚಾಲ್ತಿಯಲ್ಲಿರುವ ಗುಡ್ ಆಫೀಸ್ ಕಮಿಟಿಯಿಂದ ವಿದೇಶಿ ಕರನ್ಸಿ ವಿನಿಮಯದ ದರದ ಬಗ್ಗೆ ಕಾಲಕಾಲಕ್ಕೆ ಜಾರಿಯಾಗುವ ಪರಿಷ್ಕೃತ ದರಪಟ್ಟಿಯ ಅಧಿಕೃತ ಪಟ್ಟಿಯನ್ನು ಸರಬರಾಜುದಾರರಿಂದ ಪಡೆಯಬೇಕು, ಗುಡ್ ಆಫೀಸ್ ಕಮಿಟಿಯವರು ನಿಗದಿಪಡಿಸಿದ ದರವನ್ನೇ ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಅನ್ವಯಿಸತಕ್ಕದ್ದು.

7. ಒಂದೇ ಶೀರ್ಷಿಕೆಯನ್ನು ಪುನ: ಖರೀದಿಸಬಾರದು. ಆದರೆ ಹೆಚ್ಚು ಪ್ರತಿಗಳ ಅವಶ್ಯಕತೆಯಿದ್ದಲ್ಲಿ, ಓದುಗರ ಬೇಡಿಕೆಯನ್ನು ಗಣನೆಗೆ ತೆಗೆದುಕೊಂಡು, ಆಯ್ಕೆ ಸಮಿತಿಯ ಒಪ್ಪಿಗೆ ಪಡೆದು ಖರೀದಿಬಹುದು.

ಅ) ಸರಬರಾಜು ಆದೇಶವನ್ನು ಸಾಧ್ಯವಾದಷ್ಟು ಮಟ್ಟಿಗೆ ಲೇಖಕ, ಲೇಖಕ-ಪ್ರಕಾಶಕರಿಗೆ ನೀಡಬೇಕು.

8. ಯಾವುದೇ ಸಂಸ್ಥೆ/ಲೇಖಕ-ಪ್ರಕಾಶಕ/ಪ್ರಕಾಶಕರಿಂದ ಒಂದು ಆರ್ಥಿಕ ವರ್ಷದಲ್ಲಿ ಒಟ್ಟು ಐವತ್ತು ಸಾವಿರ ರೂಪಾಯಿಗಳು (ರೂ.50,000-00) ಬೆಲೆಗಿಂತ ಹೆಚ್ಚು ಬೆಲೆಯ ಪುಸ್ತಕಗಳನ್ನು ಖರೀದಿಸಬಾರದು (ಸದರಿ ಮೊತ್ತದಲ್ಲಿ ಸೋಡಿಯ ಮೊತ್ತ ಸೇರಿರುವುದಿಲ್ಲ).

9. (ಅ) ಗ್ರಂಥಗಳ ಗುಣಮೌಲ್ಯ, ಬೇಡಿಕೆ, ಉಪಯುಕ್ತತೆ ಮತ್ತು ಬೆಲೆಗಳನ್ನು ಗಮನದಲ್ಲಿಟ್ಟುಕೊಂಡು ಜಿಲ್ಲಾ/ನಗರ/ಸಂಚಾರಿ ಗ್ರಂಥಾಲಯಗಳಿಗೆ ಒಂದರಿಂದ ಮೂರು ಹಾಗೂ ಗ್ರಾಮ ಪಂಚಾಯತ್ ಗ್ರಂಥಾಲಯಕ್ಕೆ ಒಂದು ಪ್ರತಿಯಂತೆ ಖರೀದಿಸತಕ್ಕದ್ದು.

(ಆ) ಇಲಾಖೆಯ ಗ್ರಂಥಾಲಯಗಳ ಸರ್ವತೋಮುಖ ಅಭಿವೃದ್ಧಿ ದೃಷ್ಟಿಯಿಂದ ಆರ್ಥಿಕವಾಗಿ ದುರ್ಬಲವಾದ ಜಿಲ್ಲಾ/ನಗರ ಕೇಂದ್ರ ಗ್ರಂಥಾಲಯಗಳಿಗಾಗಿ ಪುಸ್ತಕಗಳನ್ನು ದಾನರೂಪದಲ್ಲಿ ನೀಡಲು ಅನುವುಮಾಡಿಕೊಳ್ಳುವ ದೃಷ್ಟಿಯಿಂದ ಬೆಂಗಳೂರು ನಗರ ಕೇಂದ್ರ ಗ್ರಂಥಾಲಯದ ಐದು ವಲಯಗಳಲ್ಲಿ ತಲಾ ಒಂದು ಶೀರ್ಷಿಕೆಯ 1 ರಿಂದ 6 ಪ್ರತಿಗಳನ್ನು ಖರೀದಿಸಿ ಅಂತಹ ದುರ್ಬಲವಾದ ಗ್ರಂಥಾಲಯಗಳಿಗೆ ನಿರ್ದೇಶಕರ ಪೂರ್ವಾನುಮತಿಯೊಂದಿಗೆ ವಿತರಿಸುವುದು.

10. ಹೊಸದಾಗಿ ಪ್ರಾರಂಭವಾಗುವ ಗ್ರಂಥಾಲಯಗಳಿಗೆ, ಪ್ರಾರಂಭಿಕ ವರ್ಷದಲ್ಲಿ ಮಾತ್ರ ಸಾಂದರ್ಭಿಕ ಗ್ರಂಥಗಳು ಅಂದರೆ, ಪದಕೋಶ, ವಿಶ್ವಕೋಶ, ವಾರ್ಷಿಕ ಪುಸ್ತಕಗಳು ಹಾಗೂ ಇತರ ಶೈಕ್ಷಣಿಕ ಅಗತ್ಯಕ್ಕೆ ತಕ್ಕಂತೆ ಇರುವ ಪುಸ್ತಕಗಳು, ಮಹಾನ್ ವ್ಯಕ್ತಿಗಳ ಜೀವನ ಚರಿತ್ರೆ ಹಾಗೂ ಉತ್ತಮ ಮೌಲ್ಯಗಳುಳ್ಳ ಗ್ರಂಥಗಳ ಮಹಾನ್ ಲೇಖಕರ ಪುಸ್ತಕಗಳು ಮರು ಮುದ್ರಣ ಸೇರಿದಂತೆ ಆಯಾಯಾ ವರ್ಷದಲ್ಲಿ ಪ್ರಕಟಗೊಂಡಿರಬೇಕೆಂಬ ಷರತ್ತು ಇಲ್ಲದೆ ಗ್ರಂಥಗಳನ್ನು ಖರೀದಿಸಬಹುದು. ಹಾಗೂ ಸದರಿ ಪುಸ್ತಕ ಆಯ್ಕೆಗಾಗಿ ಆಯಾಯಾ ಜಿಲ್ಲಾ/ನಗರ ಗ್ರಂಥಾಲಯ ಪ್ರಾಧಿಕಾರದ ಅನುಮೋದನೆಯನ್ನು ಪಡೆಯುವುದು.

11. (ಅ) ಪುಸ್ತಕಗಳ ಪ್ಯಾಕಿಂಗ್ ಹಾಗೂ ರವಾನಿಸುವ ಪುಸ್ತಕಗಳ ಸಾಗಾಣಿಕಾ ವೆಚ್ಚ ಮತ್ತು ಡ್ಯಾಮರೇಜ್ ಇದ್ದಲ್ಲಿ, ಪುಸ್ತಕ ಸರಬರಾಜುದಾರರು ಭರಿಸಬೇಕು.

(ಆ) ಎಲ್ಲಾ ಪುಸ್ತಕಗಳ ಖರೀದಿಯನ್ನು ಈ ಆದೇಶದನ್ವಯ ನಿಗದಿಪಡಿಸಿದ ಕಾರ್ಯ ವಿಧಾನವನ್ನು ಪಾಲಿಸಿ ಮಾಡತಕ್ಕದ್ದು. ಅದರ ಉಲ್ಲಂಘನೆ ಮಾಡುವ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು.

(ಇ) ಹೆಚ್ಚು ಬೇಡಿಕೆ ಇರುವ ಪುಸ್ತಕಗಳ ಅಗತ್ಯದಷ್ಟು ಸಂಖ್ಯೆಯ ಪ್ರತಿಗಳನ್ನು ಮಾತ್ರ ಕೊಂಡುಕೊಂಡು, ಅವುಗಳನ್ನು ಅನುಪಯುಕ್ತವಾಗಿ ಹಾಳು ಮಾಡುವುದು ಕಂಡು ಬಂದಲ್ಲಿ, ಸಂಬಂಧಪಟ್ಟ ಮುಖ್ಯ ಗ್ರಂಥಾಲಯಾಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳತಕ್ಕದ್ದು.

(ಈ) ಯಾವ ಓದುಗರಿಂದಲೂ ಉಪಯೋಗಿಸಲ್ಪಡದ ಕಪಾಟಿನಲ್ಲಿಯೇ ಹೆಚ್ಚಿಗೆ ಇರುವ ಗ್ರಂಥಗಳ ಹಾಗೂ ಹರಿದುಹೋಗಿರುವ ಗ್ರಂಥಗಳ ವಿವರಣಾತ್ಮಕ ಪಟ್ಟಿಯನ್ನು ತಯಾರಿಸಿ, ಕೈಗೊಳ್ಳಬೇಕಾಗಿರುವ ಕ್ರಮವನ್ನು ಸೂಚಿಸಿ, ನಿರ್ದೇಶಕರ ಕಛೇರಿಗೆ ವರದಿಯನ್ನು ಸಲ್ಲಿಸತಕ್ಕದ್ದು.

12. ಗ್ರಂಥಾಲಯದ ಸಂಗ್ರಹದಲ್ಲಿರುವ ಪುಸ್ತಕಗಳು ಹರಿದು ಹಾಳಾದ/ಕಳೆದು ಹೋದ ಮತ್ತು ಲಭ್ಯವಿಲ್ಲದ ಸಂದರ್ಭದಲ್ಲಿ ಅಂತಹ ಗ್ರಂಥಗಳನ್ನು ನೇರವಾಗಿ ಮುಖ್ಯ ಗ್ರಂಥಾಲಯಾಧಿಕಾರಿಗಳೇ ಖರೀದಿಸಿ ಗ್ರಂಥಾಲಯದಲ್ಲಿಡುವುದು.

13. ಮುಖ್ಯ ಗ್ರಂಥಾಲಯಾಧಿಕಾರಿಗಳು, ಜಿಲ್ಲಾ/ನಗರ ಪ್ರಾಧಿಕಾರ ಈ ಪುಸ್ತಕ ಖರೀದಿ ಬಗ್ಗೆ ಕೈಗೊಂಡ ಕ್ರಮವನ್ನು ಕುರಿತು ನಿರ್ದೇಶಕರ ಕಛೇರಿಗೆ ವಾರ್ಷಿಕ ವರದಿ ಸಲ್ಲಿಸತಕ್ಕದ್ದು. ಪುಸ್ತಕಗಳ ಆಯ್ಕೆ ಬಗ್ಗೆ ಏನಾದರೂ ದೂರುಗಳಿದ್ದಲ್ಲಿ ನಿರ್ದೇಶಕರಿಗೆ ವರದಿ ಮಾಡತಕ್ಕದ್ದು.

14. (ಅ) ಪುಸ್ತಕ ಸರಬರಾಜು : ಮಾರಾಟದ ಬಗ್ಗೆ ಅನ್ವಯವಾಗುವ ತೆರಿಗೆ ಪಾವತಿ ಸೇರಿದಂತೆ, ವಿವಿಧ ಕಾಯಿದೆಗಳನ್ನು ಚಾಚೂ ತಪ್ಪದೆ ಅನುಸರಿಸುವುದು ಮಾರಾಟಗಾರನ : ಸರಬರಾಜುದಾರನ : ಲೇಖಕನ ಜವಾಬ್ದಾರಿಯಾಗಿರುತ್ತದೆ.

(ಆ) ಪುಸ್ತಕ ಸರಬರಾಜಿಗೆ ಮೊದಲು, ಸರಬರಾಜು ಕಾಲದಲ್ಲಿ ಅಥವಾ ಸರಬರಾಜು ನಂತರ ಇಲಾಖೆಗೆ ತಪ್ಪು ಮಾಹಿತಿಯನ್ನು ನೀಡಿ, ಬೆಲೆಗಳನ್ನು ಸರಿಯಾಗಿ ತಿಳಿಸದೇ, ಗುಣಮಟ್ಟವನ್ನು ಕಾಪಾಡಿಕೊಳ್ಳದೇ ಅಥವಾ ಇನ್ನಾವುದೇ ರೀತಿಯಿಂದಲೂ ಪುಸ್ತಕಗಳ ಸರಬರಾಜು : ಮಾರಾಟ ಸರಿಯಾಗಿ ಆಗದೇ ಇರುವುದು ಕಂಡು ಬಂದಲ್ಲಿ, ಅಂತಹ ಸರಬರಾಜುದಾರರಿಗೆ : ಮಾರಾಟಗಾರರಿಗೆ ಪಾವತಿಯಾಗಿರುವ ಅಥವಾ ಪಾವತಿಯಾಗಬೇಕಾಗಿರುವ ಒಟ್ಟು ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಮತ್ತು ಅಂತಹವರನ್ನು ಸರ್ಕಾರಿ ಇಲಾಖೆಗೆ ಮತ್ತು ಸರ್ಕಾರದ ನಿಯಂತ್ರಣದಲ್ಲಿ ಬರುವ ಎಲ್ಲಾ ಸಂಸ್ಥೆಗಳಿಗೆ ಸಂಬಂಧಿಸಿದ ಪುಸ್ತಕ ಖರೀದಿಗೆ ಸಂಬಂಧಪಟ್ಟಂತೆ ಕಪ್ಪು ಪಟ್ಟಿಗೆ ಸೇರಿಸಬಹುದೆಂದು ಇಲಾಖೆಗೆ ಸ್ಟ್ಯಾಂಪ್ ಪೇಪಾರ್‌ನಲ್ಲಿ ಮುಚ್ಚಳಿಕೆಯನ್ನು ಸರಬರಾಜು : ಖರೀದಿ ಆದೇಶ ನೀಡುವ ಮೊದಲು ಅಂತಹ ಸರಬರಾಜುದಾರರು : ಮಾರಾಟಗಾರರು ನೀಡತಕ್ಕದ್ದು. ಪರಂತು, ಮೇಲೆ ನಮೂದಿಸಿದಂತೆ ಉಲ್ಲಂಘನೆ ಅಥವಾ ಲೋಪದೋಷಗಳಿಗೆ ಅಂತಹ ಕ್ರಮಗಳಿಂದ ಬಾಧಿತನಾಗಬಹುದಾದ ವ್ಯಕ್ತಿಗೆ ಅಥವಾ ಬಾಧಿತವಾಗಬಹುದಾದ ಸಂಸ್ಥೆಗೆ ತನ್ನ ಅಹವಾಲುಗಳನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡದ ಹೊರತು ಅಂತಹ ಕ್ರಮಗಳನ್ನು ಕೈಗೊಳ್ಳತಕ್ಕದ್ದಲ್ಲ.

– 0 – 0 – 0 –

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಪುಸ್ತಕ ಖರೀದಿಯಲ್ಲಿ ಬೆಂಗಳೂರು ನಗರದ ಐದು ವಲಯಗಳಿಗೆ ಸಂಬಂಧಿಸಿದಂತೆ ಒಂದು ಆರ್ಥಿಕ ವರ್ಷದಲ್ಲಿ ಒಂದು ಸಂಸ್ಥೆಗೆ ನೀಡುವ ಪುಸ್ತಕ ಖರೀದಿ ಮೊತ್ತವನ್ನು ಹೆಚ್ಚಿಸುವ ಬಗ್ಗೆ.

**ಓದಲಾಗಿದೆ:** 1) ದಿನಾಂಕ:07-02-2005ರ ಸರ್ಕಾರದ ಆದೇಶ ಸಂಖ್ಯೆ: ಇಡಿ 1 ಎಲ್‌ಬಿಪಿ 2004.

2) ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ,, ಬೆಂಗಳೂರು ಇವರ ದಿನಾಂಕ:21-07-2006ರ ಪತ್ರ ಸಂಖ್ಯೆ: ಸಾಗ್ರಂ.ಅವಿ/ಪುಖವಿ/2773/2005-06

\- - - - - - - -

**ಪ್ರಸ್ತಾವನೆ:**

ಮೇಲೆ (1)ರಲ್ಲಿ ಓದಲಾದ ದಿನಾಂಕ:07-02-2005ರ ಸರ್ಕಾರದ ಆದೇಶದಲ್ಲಿನ ಅನುಬಂಧ 3ರ ಕಂಡಿಕೆ 8ರಲ್ಲಿ ಯಾವುದೇ ಸಂಸ್ಥೆ/ಲೇಖಕ-ಪ್ರಕಾಶಕ/ಪ್ರಕಾಶಕರಿಂದ ಒಂದು ಆರ್ಥಿಕ ವರ್ಷದಲ್ಲಿ ಒಟ್ಟು ಐವತ್ತು ಸಾವಿರ ರೂಪಾಯಿಗಳ ಬೆಲೆಗಿಂತ ಹೆಚ್ಚು ಬೆಲೆಯ ಪುಸ್ತಕಗಳನ್ನು ಖರೀದಿಸಬಾರದೆಂಬ ಷರತ್ತನ್ನು ಪುಸ್ತಕ ಖರೀದಿ ವಿಧಾನಗಳು ಶೀರ್ಷಿಕೆಯಡಿ ನಿರ್ಬಂಧಿಸಲಾಗಿದೆ. ಸದರಿ ಆದೇಶದ ಅನುಬಂಧ 3ರ ಕಂಡಿಕೆ 9(ಅ) ರಲ್ಲಿ ಇಲಾಖೆಯ ಗ್ರಂಥಾಲಯಗಳ ಸರ್ವತೋಮುಖ ಅಭಿವೃದ್ಧಿ ದೃಷ್ಟಿಯಿಂದ ಆರ್ಥಿಕವಾಗಿ ದುರ್ಬಲವಾದ ಜಿಲ್ಲಾ/ನಗರ ಕೇಂದ್ರ ಗ್ರಂಥಾಲಯಗಳಿಗಾಗಿ ಪುಸ್ತಕಗಳನ್ನು ದಾನದ ರೂಪದಲ್ಲಿ ನೀಡಲು ಅನುವುಮಾಡಿಕೊಳ್ಳುವ ದೃಷ್ಟಿಯಿಂದ ಬೆಂಗಳೂರು ನಗರ ಕೇಂದ್ರ ಗ್ರಂಥಾಲಯದ ಐದು ವಲಯಗಳಲ್ಲಿ ತಲಾ ಒಂದು ಶೀರ್ಷಿಕೆಯ ಒಂದರಿಂದ ಆರು ಪ್ರತಿಗಳನ್ನು ಖರೀದಿಸಿ ಅಂತಹ ದುರ್ಬಲವಾದ ಗ್ರಂಥಾಲಯಗಳಿಗೆ ನಿರ್ದೇಶಕರ ಪೂರ್ವಾನುಮತಿಯೊಂದಿಗೆ ವಿತರಿಸಲು ಆಸ್ಪದ ಕಲ್ಪಿಸಲಾಗಿರುತ್ತದೆ.

2\. ಮೇಲೆ (2)ರಲ್ಲಿ ಓದಲಾದ ದಿನಾಂಕ:21-07-2006ರ ಪತ್ರದಲ್ಲಿ ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ ಇವರು ಬಹಳಷ್ಟು ಜಿಲ್ಲಾ/ನಗರ ಕೇಂದ್ರ ಗ್ರಂಥಾಲಯಗಳಲ್ಲಿನ ಆರ್ಥಿಕ ಸ್ಥಿತಿ ಅಷ್ಟೊಂದು ಸಬಲವಾಗಿಲ್ಲದ ಕಾರಣ ಆಯ್ಕೆಯಾದ ಎಲ್ಲಾ ಪುಸ್ತಕಗಳನ್ನು ಖರೀದಿಸುವುದು ಕಷ್ಟ ಸಾಧ್ಯವಾಗಿರುತ್ತದೆ ಎಂಬ ಅಂಶವನ್ನು ಮನಗಂಡು ಆರ್ಥಿಕವಾಗಿ ದುರ್ಬಲವಾಗಿರುವ ಜಿಲ್ಲಾ/ನಗರ ಕೇಂದ್ರ ಗ್ರಂಥಾಲಯಗಳಿಗೆ ದಾನದ ರೂಪದಲ್ಲಿ

ನೀಡಲು ಅನುವುಮಾಡಿಕೊಡುವ ದೃಷ್ಟಿಯಿಂದ ಆರ್ಥಿಕವಾಗಿ ಸದೃಢವಾಗಿರುವ ಬೆಂಗಳೂರು ನಗರ ಕೇಂದ್ರ ಗ್ರಂಥಾಲಯ ಐದು ವಲಯಗಳಿಗೆ ಸಂಬಂಧಿಸಿದಂತೆ ಒಂದು ಆರ್ಥಿಕ ವರ್ಷದಲ್ಲಿ ಒಂದು ಸಂಸ್ಥೆಗೆ ನೀಡುವ ಪುಸ್ತಕ ಖರೀದಿ ಮೊತ್ತವನ್ನು ರೂ.50,000/– ರಿಂದ 1,00,000/–ಕ್ಕೆ ಹೆಚ್ಚಿಸುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

3. ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ ಇವರ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

***<u>ಸರ್ಕಾರದ ಆದೇಶ ಸಂಖ್ಯೆ: ಇಡಿ 68 ಎಲ್‌ಬಿಎ 2006, ಬೆಂಗಳೂರು, ದಿನಾಂಕ: 02ನೇ ಸೆಪ್ಟೆಂಬರ್ 2006</u>***

4. ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ದಿನಾಂಕ:07–02–2005ರ ಸರ್ಕಾರದ ಆದೇಶ ಸಂಖ್ಯೆ:ಇಡಿ 1 ಎಲ್‌ಬಿಎ 2004ರ ಅನುಬಂಧ 3ರ ಕಂಡಿಕೆ 8ರನ್ವಯ ಯಾವುದೇ ಸಂಸ್ಥೆ/ಲೇಖಕ–ಪ್ರಕಾಶಕ/ಪ್ರಕಾಶಕರಿಂದ ಒಂದು ಆರ್ಥಿಕ ವರ್ಷದಲ್ಲಿ ಪುಸ್ತಕಗಳನ್ನು ಖರೀದಿಸಲು ನಿಗದಿಪಡಿಸಲಾಗಿದ್ದ ಮೊತ್ತ ರೂ.50,000/–ಗಳ ಮಿತಿಯನ್ನು ರೂ.1,00,000/– (ಒಂದು ಲಕ್ಷ ರೂಪಾಯಿಗಳು ಮಾತ್ರ)ಗಳಿಗೆ ಈ ಮೂಲಕ ಹೆಚ್ಚಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ.ಎನ್. [illegible])
ಸರ್ಕಾರದ ಅಧೀನ ಕಾರ್ಯದರ್ಶಿಗಳು
ಶಿಕ್ಷಣ ಇಲಾಖೆ.

**ಇವರಿಗೆ:**

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು.
3) ಮುಖ್ಯಗ್ರಂಥಾಲಯಾಧಿಕಾರಿಗಳು, ನಗರ ಕೇಂದ್ರ ಗ್ರಂಥಾಲಯ ಪೂರ್ವ/ಪಶ್ಚಿಮ/ಉತ್ತರ/ದಕ್ಷಿಣ/ಕೇಂದ್ರ ವಲಯ, ಬೆಂಗಳೂರು.
4) ಶಾಖಾ ರಕ್ಷಾ ಕಡತ.
5) ಹೆಚ್ಚುವರಿ ಪ್ರತಿ.

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಸಾರ್ವಜನಿಕ ಗ್ರಂಥಾಲಯ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಗ್ರಂಥಾಲಯಗಳಿಗಾಗಿ ಪುಸ್ತಕ ಆಯ್ಕೆ ಮತ್ತು ಖರೀದಿಗೆ ಸಂಬಂಧಿಸಿದ ಹೆಚ್ಚುವರಿ ಮಾರ್ಗಸೂಚಿಗಳು.

**ಓದಲಾಗಿದೆ:** 1) ದಿನಾಂಕ:07-05-2005ರ ಸರ್ಕಾರದ ಆದೇಶ ಸಂಖ್ಯೆ: ಇಡಿ 1 ಎಲ್‌ಬಿಪಿ 2004.

2). ದಿನಾಂಕ:18-08-2006ರಂದು ಸರ್ಕಾರದ ಅಧಿಕಾರಿಗಳು, ಸಾಹಿತಿಗಳು ಮತ್ತು ಪ್ರಕಾಶಕರೊಂದಿಗೆ ನಡೆದ ಸಭೆಯ ನಡವಳಿ.

3) ವ್ಯವಸ್ಥಾಪಕ ನಿರ್ದೇಶಕರು, ನವಕರ್ನಾಟಕ ಪಬ್ಲಿಕೇಶನ್ ಪ್ರೈ.ಲಿ., ರವರ ದಿನಾಂಕ:05-09-2006ರ ಪತ್ರ.

4) ದಿನಾಂಕ:12-10-2006ರಂದು ಸರ್ಕಾರದ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.

\- - - - - -

**ಪ್ರಸ್ತಾವನೆ:-**

ಮೇಲೆ (1)ರಲ್ಲಿ ಓದಲಾದ ಸರ್ಕಾರದ ದಿನಾಂಕ:07-02-2005ರ ಆದೇಶದನ್ವಯ, ಸಾರ್ವಜನಿಕ ಗ್ರಂಥಾಲಯ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಗ್ರಂಥಾಲಯಗಳಿಗಾಗಿ ಪುಸ್ತಕ ಆಯ್ಕೆ ಮತ್ತು ಖರೀದಿಗೆ ಸಂಬಂಧಿಸಿದ ವ್ಯಾಪಕವಾದ ಮಾರ್ಗಸೂಚಿಗಳನ್ನು ನೀಡಲಾಗಿದೆ. ಮೇಲೆ (2)ರಲ್ಲಿ ಓದಲಾದ ದಿನಾಂಕ:18-08-2006ರಂದು ನಡೆದ ಸಭೆಯಲ್ಲಿ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಗ್ರಂಥಾಲಯಗಳಿಗಾಗಿ ಖರೀದಿಸಲಾಗುವ ಪುಸ್ತಕಗಳ ಬೆಲೆಗಳನ್ನು ನಿಗದಿಪಡಿಸುವ ಬಗ್ಗೆ ಚರ್ಚಿಸಲಾಯಿತು.

2. ಈ ವಿಷಯಕ್ಕೆ ಸಂಬಂಧಿಸಿದಂತೆ ಮೇಲೆ ಓದಲಾದ (3)ರ ಪತ್ರದನ್ವಯ ವ್ಯವಸ್ಥಾಪಕ ನಿರ್ದೇಶಕರು, ನವಕರ್ನಾಟಕ ಪಬ್ಲಿಕೇಷನ್ ಪ್ರೈ.ಲಿ, ಬೆಂಗಳೂರು ಅವರು ಪುಸ್ತಕ ಖರೀದಿ ಬೆಲೆಯನ್ನು ನಿಗದಿಪಡಿಸಲು ಕೆಲವೊಂದು ಸಲಹೆ ಸೂಚನೆಗಳನ್ನು ನೀಡಿರುವರು. ಈ ಉಲ್ಲೇಖಗಳಿಗೆ ಅನುಗುಣವಾಗಿ ಮೇಲೆ ಓದಲಾದ (4)ರಂತೆ ಸರ್ಕಾರವು ತಜ್ಞರ ಸಭೆಯನ್ನು ಕರೆದು, ಸಾರ್ವಜನಿಕ ಗ್ರಂಥಾಲಯ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಗ್ರಂಥಾಲಯಗಳಿಗಾಗಿ ಖರೀದಿಸುವ

ಪುಸ್ತಕಗಳ ಆಯ್ಕೆ, ಬೆಲೆ ನಿಗದಿ ಇತ್ಯಾದಿ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ತೀರ್ಮಾನಿಸಿರುವ ಹಿನ್ನಲೆಯಲ್ಲಿ ಈ ಕೆಳಕಂಡ ಹೆಚ್ಚುವರಿ ಮಾರ್ಗಸೂಚಿ ಇತ್ಯಾದಿಗಳನ್ನು ಈ ಮೂಲಕ ನಿಗದಿಪಡಿಸಿದೆ.

***<u>ಸರ್ಕಾರದ ಆದೇಶ ಸಂಖ್ಯೆ: ಇಡಿ 170 ಎಲ್‌ಬಿಜಿ 2006, ಬೆಂಗಳೂರು ದಿನಾಂಕ:27-11-2006</u>***

3. ಮೇಲೆ (1)ರಲ್ಲಿ ಓದಲಾದ ದಿನಾಂಕ:07--02--2005ರ ಸರ್ಕಾರದ ಆದೇಶವನ್ನು ಭಾಗಶಃ

ಮಾರ್ಪಡಿಸಿ, ಈ ಕೆಳಕಂಡಂತೆ ಆದೇಶಿಸಿದೆ:-

(1) ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ಖರೀದಿಸುವ ಪುಸ್ತಕಗಳಿಗೆ, ತಕ್ಷಣದಿಂದ ಜಾರಿಗೆ ಬರುವಂತೆ, ಈ ಕೆಳಕಂಡ ಬೆಲೆಗಳನ್ನು ನಿಗದಿಪಡಿಸಿ ಆದೇಶಿಸಿದೆ.

| ಕ್ರಸಂ | ಪುಸ್ತಕದ ಅಳತೆ | ಕಾಗದದ ಗುಣಮಟ್ಟ | ಒಂದು ಪುಟಕ್ಕೆ ನಿಗದಿಪಡಿಸಿದ ಬೆ |
|---|---|---|---|
| 1 | ಕ್ರೌನ್ 1/8 | ಬಿಳಿಹಾಳೆ (58 Gsm) | 25 ಪೈಸೆ |
| | | ಮ್ಯಾಪ್‌ಲಿತೋ (70 Gsm) | 31 ಪೈಸೆ |
| 2 | ಕ್ರೌನ್ 1/4 | ಬಿಳಿಹಾಳೆ (58 Gsm) | 50 ಪೈಸೆ |
| | | ಮ್ಯಾಪ್‌ಲಿತೋ (70 Gsm) | 62 ಪೈಸೆ |
| 3 | ಡೆಮಿ 1/8 | ಬಿಳಿಹಾಳೆ (58 Gsm) | 31 ಪೈಸೆ |
| | | ಮ್ಯಾಪ್‌ಲಿತೋ (70 Gsm) | 38 ಪೈಸೆ |
| 4 | ಡೆಮಿ 1/4 | ಬಿಳಿಹಾಳೆ (58 Gsm) | 63 ಪೈಸೆ |
| | | ಮ್ಯಾಪ್‌ಲಿತೋ (70 Gsm) | 76 ಪೈಸೆ |

5 ಬೈಂಡಿಂಗ್ (ಬಾಕ್ಸ್ ಟೈಪ್) ಹಾರ್ಡ್ ಬೌಂಡ್ ಒಂದು ಪುಸ್ತಕ್ಕೆ ರೂ.20/-

I. ಭಾರತೀಯ ಇತರ ಭಾಷೆಯ ಪುಸ್ತಕಗಳಿಗೆ ಮುಖಪುಟದ ಬೆಲೆ ಮೇಲೆ ಶೇ.25ರ ಸೋಡಿ.

II. ಆಂಗ್ಲ ಭಾಷೆಯ ಪುಸ್ತಕಗಳಿಗೆ (ಪ್ರಚಲಿತ ವರ್ಷದಲ್ಲಿ ಪ್ರಕಟಗೊಂಡಿದ್ದು) ಮುಖ ಪುಟದ ಬೆಲೆ ಮೇಲೆ ಶೇ.20ರ ಸೋಡಿ.

---

(3) ರಾಜ್ಯಮಟ್ಟದ ಪುಸ್ತಕ ಆಯ್ಕೆ ಸಮಿತಿಗೆ ಆಯ್ಕೆಗಾಗಿ ಬಂದಂತಹ ಎಲ್ಲಾ ಪುಸ್ತಕಗಳನ್ನು ಬೆಂಗಳೂರಿನಲ್ಲಿರುವ ಯಾವುದಾದರೊಂದು ಸಾರ್ವಜನಿಕ ಗ್ರಂಥಾಲಯದಲ್ಲಿ ಪ್ರದರ್ಶನಕ್ಕೆ ಇಡಲು ನಿರ್ದೇಶಕರು ಸಾರ್ವಜನಿಕ ಗ್ರಂಥಾಲಯ ಇಲಾಖೆ ಕ್ರಮ ಕೈಗೊಳ್ಳತಕ್ಕದ್ದು. ಜಿಲ್ಲಾ/ನಗರ ಕೇಂದ್ರ ಗ್ರಂಥಾಲಯಗಳಲ್ಲಿ ಪಟ್ಟಿಯನ್ನು ಮಾತ್ರ ಪ್ರದರ್ಶಿಸತಕ್ಕದ್ದು.

(4) ಮೇಲೆ (1)ರಲ್ಲಿ ಓದಲಾದ ಸರ್ಕಾರದ ದಿನಾಂಕ:07-02-2005ರ ಅನುಬಂಧ- 3ರ ಕಂಡಿಕೆ 3(ಈ)ವನ್ನು ಬದಲಾಯಿಸಿ ಈ ಕೆಳಕಂಡಂತೆ ಪ್ರತಿಸ್ಥಾಪಿಸಿದೆ (Substituted):

"3(ಈ) ಮುಖ್ಯ ಗ್ರಂಥಾಲಯಾಧಿಕಾರಿಗಳ ವಿವೇಚನ ಕೋಟಾದಲ್ಲಿ ಶೇ.75ರಷ್ಟು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು ಖರೀದಿಸಲು ಹಾಗೂ ಇನ್ನುಳಿದ ಪಾಲಿನಿಂದ ಪಠ್ಯಪುಸ್ತಕ, ಸ್ಥಳೀಯ ಲೇಖಕರ ಪುಸ್ತಕಗಳು ಹಾಗೂ ಪರಾಮರ್ಶನ ಪುಸ್ತಕಗಳನ್ನೇ ಖರೀದಿಸತಕ್ಕದ್ದು. ಬೆಂಗಳೂರು ನಗರದ ಹಾಗೂ ಇತರೆ ನಗರ/ಜಿಲ್ಲಾ ಪ್ರಾಧಿಕಾರಗಳಿಗೆ ವಿವೇಚನ ಕೋಟಾದಡಿ ಬೆಂಗಳೂರು ನಗರ ಪ್ರಾಧಿಕಾರಗಳಿಗೆ – ಶೇ.5% ಮತ್ತು ಇತರ ನಗರ/ಜಿಲ್ಲಾ ಪ್ರಾಧಿಕಾರಗಳಿಗೆ – ಶೇ.10%ಗಳಿಗೆ ಸೀಮಿತಗೊಳಿಸಲಾಗಿದೆ. ಹಾಗೆಯೇ ಪಠ್ಯಪುಸ್ತಕಗಳನ್ನು ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು ಖರೀದಿಸುವಾಗ ಹಿಂದಿನ ಎರಡು ವರ್ಷದ ಪುಸ್ತಕಗಳನ್ನು ಮಾತ್ರ ಖರೀದಿಸತಕ್ಕದ್ದು. ಯಾವುದೇ ಕಾರಣಕ್ಕೆ ವಿವೇಚನ ಕೋಟಾದಡಿ ಎರಡು ವರ್ಷಕ್ಕಿಂತ ಹಳೆಯದಾದ ಪುಸ್ತಕಗಳನ್ನು ರಿಮೇಂಡರ್ಸ್‌ನ್ನು ಖರೀದಿಸಬಾರದು".

(5) ಜೋರ ಪ್ರಕಟಣೆ ಪುಸ್ತಕಗಳನ್ನು ಆಯ್ಕೆಗೆ ನೀಡಿದಾಗ ಅದನ್ನು ಪರಿಶೀಲಿಸಿ ಅಂತಹ ಪುಸ್ತಕಗಳನ್ನು ಕಡ್ಡಾಯವಾಗಿ ನಿಷೇದಿಸತಕ್ಕದ್ದು. ಹಾಗೂ ಒಂದು ವೇಳೆ ಸರಬರಾಜುದಾರರು ನೀಡಿದ್ದೆ ಆದರೆ, ಅಂತಹ ಸರಬರಾಜುದಾರರನ್ನು ಕಪ್ಪುಪಟ್ಟಿಗೆ ಸೇರಿಸತಕ್ಕದ್ದು.

(6) ಮೇಲೆ (1)ರಲ್ಲಿ ಓದಲಾದ ಸರ್ಕಾರದ ದಿನಾಂಕ:07-02-2005ರ ಆದೇಶದ ಅನುಬಂಧ-3ರ ಕಂಡಿಕೆ14(ಅ)ವನ್ನು ಬದಲಾಯಿಸಿ ಈ ಕೆಳಕಂಡಂತೆ ಪ್ರತಿಸ್ಥಾಪಿಸಿದೆ (Substituted):

"14(ಅ) ಪುಸ್ತಕ ಸರಬರಾಜು: ಮಾರಾಟದ ಬಗ್ಗೆ ಅನ್ವಯವಾಗುವ ತೆರಿಗೆ ಪಾವತಿ ಸೇರಿದಂತೆ, ವಿವಿಧ ಕಾಯ್ದೆಗಳನ್ನು ಚಾಚುತಪ್ಪದೆ ಅನುಸರಿಸುವುದು ಮಾರಾಟಗಾರನ: ಸರಬರಾಜುದಾರನ: ಲೇಖಕನ ಜವಾಬ್ದಾರಿಯಾಗಿರುತ್ತದೆ. ಸರಬರಾಜು ಮತ್ತು ಪಾವತಿಗೆ ಸಂಬಂಧಿಸಿದಂತೆ ಈ ಕೆಳಕಂಡ ಕ್ರಮಗಳನ್ನು ಪಾಲಿಸತಕ್ಕದ್ದು.

(i) ಆದೇಶ ನೀಡಿದ 30 ದಿನಗಳೊಳಗಾಗಿ ಸರಬರಾಜುದಾರರು ಪುಸ್ತಕಗಳನ್ನು ಸರಬರಾಜು ಮಾಡತಕ್ಕದ್ದು.

(ii) ನಗರ/ಜಿಲ್ಲಾ ಕೇಂದ್ರ ಗ್ರಂಥಾಲಯದ ಮುಖ್ಯ ಗ್ರಂಥಾಲಯಾಧಿಕಾರಿಗಳು 30 ದಿನಗಳೊಳಗಾಗಿ ಬಂದಂತಹ ಪುಸ್ತಕಗಳನ್ನು ವಿತರಣಾ ಸಂಖ್ಯೆಗೆ ಅನುಗುಣವಾಗಿ ಇರುವುದನ್ನು ಪರಿಶೀಲಿಸಿ ದೃಢೀಕರಣ ಪತ್ರವನ್ನು (Stock certificate) ಸರಬರಾಜುದಾರರಿಗೆ ಕಳುಹಿಸತಕ್ಕದ್ದು. ಸದರಿ ಸ್ವೀಕೃತಿಯನ್ನು ಕಳುಹಿಸಲು ತಡಮಾಡದಂತೆ ನೋಡಿಕೊಳ್ಳಲು ನಿರ್ದೇಶಕರು ಸಾರ್ವಜನಿಕ ಗ್ರಂಥಾಲಯ ಇಲಾಖೆ ಇವರು ಕ್ರಮ ತೆಗೆದುಕೊಳ್ಳತಕ್ಕದ್ದು.

(iii) ಸರಬರಾಜುದಾರರು ಎಲ್ಲಾ ದೃಢೀಕರಣ ಪತ್ರಗಳೊಂದಿಗೆ ಬಿಲ್ಲುಗಳನ್ನು ಸಿದ್ಧಪಡಿಸಿ, ನಿರ್ದೇಶಕರು ಸಾರ್ವಜನಿಕ ಗ್ರಂಥಾಲಯ ಇಲಾಖೆ ಇವರ ಕಛೇರಿಗೆ ಕಳುಹಿಸಿದ 60 ದಿನಗಳ ಒಳಗಾಗಿ ಹಣ ಪಾವತಿ ಮಾಡತಕ್ಕದ್ದು".

(7) **ಜಾಗೃತಿ ಸಮಿತಿಯನ್ನು ರಚಿಸುವ ಬಗ್ಗೆ** : ಆಯ್ಕೆಯಾದ ಪುಸ್ತಕಗಳನ್ನೇ ಎಲ್ಲಾ ಗ್ರಂಥಾಲಯಗಳಿಗೂ ಸರಬರಾಜುದಾರರು ಸರಬರಾಜು ಮಾಡುತ್ತಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ಪತ್ತೆ ಹಚ್ಚಲು ಈ ಕೆಳಕಂಡ ಜಾಗೃತಿ ಸಮಿತಿಗಳನ್ನು ಈ ಮೂಲಕ ರಚಿಸಲಾಗಿದೆ.

(ಅ) ಬೆಂಗಳೂರಿನಲ್ಲಿ ಮಾತ್ರ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯ ಇಬ್ಬರು ಸದಸ್ಯರು ಹಾಗೂ ಇಲಾಖಾ ನಿರ್ದೇಶಕರನ್ನೊಳಗೊಂಡ ಒಂದು ಸಮಿತಿ.

(ಆ) ಜಿಲ್ಲಾ ಅಥವಾ ನಗರ ಮಟ್ಟದಲ್ಲಿ ಆಯಾಯ ಪ್ರಾಧಿಕಾರದ ಇಬ್ಬರು ಸದಸ್ಯರನ್ನು ಹಾಗೂ ಮುಖ್ಯ ಗ್ರಂಥಾಲಯಾಧಿಕಾರಿಗಳನ್ನೊಳಗೊಂಡ ಸಮಿತಿ.

ಆಯ್ಕೆಯಾದ ಪುಸ್ತಕಗಳನ್ನು ಸರಬರಾಜು ಮಾಡದಿದ್ದಲ್ಲಿ, ಅಂತಹ ಪುಸ್ತಕಗಳ ಬಿಲ್ಲನ್ನು ಪಾವತಿ ಮಾಡದಿರಲು ಹಾಗೂ ಅಂತಹ ಲೇಖಕ/ಪ್ರಕಾಶನ ಸಂಸ್ಥೆಯನ್ನು ಕಪ್ಪುಪಟ್ಟಿಗೆ ಸೇರಿಸಲು ಸದರಿ ಸಮಿತಿಗಳು ಸಕ್ಷಮ ಪ್ರಾಧಿಕಾರಕ್ಕೆ ವರದಿ ಮಾಡತಕ್ಕದ್ದು.

(8) ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಪುಸ್ತಕಗಳನ್ನು ಆಯ್ಕೆಗೆ ಸಲ್ಲಿಸುವಾಗ ಪುಸ್ತಕಗಳಲ್ಲಿ ಸಮಗ್ರ ಮಾಹಿತಿಯನ್ನು ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಕಛೇರಿಯಿಂದ ನೀಡುವ ಅರ್ಜಿ ನಮೂನೆಯಲ್ಲಿ ನಮೂದಿಸಿರುವ ಎಲ್ಲಾ ಅಂಶಗಳ ಮಾಹಿತಿಯನ್ನು ಪುಸ್ತಕದ ತಾಂತ್ರಿಕ ಪುಟದಲ್ಲಿ (Imprint page) ಕಡ್ಡಾಯವಾಗಿ ಮುದ್ರಿಸತಕ್ಕದ್ದು. ಈ ಅಂಶಗಳಲ್ಲಿ ಪ್ರಥಮ ಮುದ್ರಣದ ವರ್ಷ, ಇತ್ತೀಚಿನ ಮುದ್ರಣದ ಸಂಖ್ಯೆ (ಆವೃತ್ತಿ), ವರ್ಷ, ಕೃತಿ ಸಂಖ್ಯೆ, ಬೆಲೆ, ಬಳಸಿರುವ ಕಾಗದದ ಅಳತೆ, ಕಾಗದದ ಸ್ವರೂಪ

(Maplitho ಇತ್ಯಾದಿ), ಕಾಗದದ ಜಿಎಸ್‌ಎಂ ಪ್ರಮಾಣ ಇತ್ಯಾದಿಗಳು ಈ ನಮೂನೆಯಲ್ಲಿ ಒಳಗೊಂಡಿರಬೇಕು. ಇದನ್ನು 2007ರಲ್ಲಿ ಪ್ರಕಟಗೊಳ್ಳುವ ಪುಸ್ತಕಗಳಲ್ಲಿ ಅಳವಡಿಸತಕ್ಕದ್ದು.

(9) ಪುಸ್ತಕಗಳಿಗೆ ಸಂಬಂಧಿಸಿದಂತೆ ಒಂದು ಸಮಗ್ರ ಪುಸ್ತಕ ನೀತಿಯನ್ನು ರೂಪಿಸುವ ಅಗತ್ಯವಿದ್ದು, ಈ ಬಗ್ಗೆ ರಾಜ್ಯಮಟ್ಟದ ಸಮ್ಮೇಳನವನ್ನು ಏರ್ಪಡಿಸುವ ಕುರಿತು ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ ಇವರು ಅಗತ್ಯ ಕ್ರಮ ತೆಗೆದುಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ.ಎನ್. ಸೋಮಶೇಖರ್)
ಸರ್ಕಾರದ ಅಧೀನ ಕಾರ್ಯದರ್ಶಿಗಳು
ಶಿಕ್ಷಣ ಇಲಾಖೆ.

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ 500 ಪ್ರತಿಗಳನ್ನು ಶಿಕ್ಷಣ ಇಲಾಖೆ ಹಾಗೂ 200 ಪ್ರತಿಗಳನ್ನು ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಸರಬರಾಜು ಮಾಡಲು ಕೋರಲಾಗಿದೆ.

**ಪ್ರತಿಗಳು:-**

1) ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು.
2) ಅಧ್ಯಕ್ಷರು, ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿ, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು (ನಿರ್ದೇಶಕರ ಮುಖಾಂತರ).
3) ಶಾಖಾ ರಕ್ಷಾ ಕಡತ.
4) ಹೆಚ್ಚುವರಿ ಪ್ರತಿ.

**<u>ಕರ್ನಾಟಕ ಸರ್ಕಾರ</u>**

ಸಂಖ್ಯೆ: ಇಡಿ 231 ಎಲ್‌ಬಿಬಿ 2006

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:17.11.2007

## <u>ಸೇರ್ಪಡೆ ಆದೇಶ</u>

ಸರ್ಕಾರದ ದಿನಾಂಕ:0702.2005ರ ಆದೇಶ ಸಂಖ್ಯೆ: ಇಡಿ 1 ಎಲ್‌ಬಿಪಿ 2004ರ ಅನುಬಂಧ 3ರಲ್ಲಿನ "ಕ್ರಮ ಸಂಖ್ಯೆ:14 (ಅ)" ನಂತರ ಈ ಕೆಳಕಂಡ "ಕ್ರಮ ಸಂಖ್ಯೆ:15"ನ್ನು ಈ ಮೂಲಕ ಸೇರ್ಪಡಿಸಲಾಗಿದೆ:-

"15) ಸರಬರಾಜು ಹಕ್ಕು- ಉನ್ನತ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ, ಪುಸ್ತಕ ಆಯ್ಕೆಯಾದ ನಂತರ ಲೇಖಕರು/ಲೇಖಕ ಪ್ರಕಾಶಕರು ನೀಡುವ ಪವರ್ ಆಫ್ ಅಟಾರ್ನಿ (ಅಧಿಕಾರ ಪತ್ರ)ಯನ್ನು ಒಬ್ಬರಿಗೆ, ಒಮ್ಮೆ ಮಾತ್ರ ನೀಡಿದ ಸಂದರ್ಭದಲ್ಲಿ ಸರಬರಾಜು ಹಕ್ಕನ್ನು ಮಾನ್ಯ ಮಾಡಿ, ಸರಬರಾಜು ಹಕ್ಕು ಪಡೆದವರಿಗೆ ನಿಯಮಾನುಸಾರ ಪುಸ್ತಕದ ಮೌಲ್ಯವನ್ನು ಪಾವತಿಸಲು ಸೂಚಿಸಿದೆ."

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ.ಎನ್.ಸೋಮಶೇಖರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ

<u>ಇವರಿಗೆ:</u>

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು - ಮುಂದಿನ ರಾಜ್ಯ ಪತ್ರಿಕೆಯಲ್ಲಿ ಪ್ರಕಟಿಸಿ, ಅದರ 250 ಪ್ರತಿಗಳನ್ನು ಸರ್ಕಾರಕ್ಕೆ ಹಾಗೂ 500 ಪ್ರತಿಗಳನ್ನು ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಇವರಿಗೆ ಕಳುಹಿಸುವಂತೆ ಕೋರಲಾಗಿದೆ.

<u>ಪ್ರತಿಗಳು:-</u>

1) ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು.
2) ರಾಜ್ಯದ ಎಲ್ಲಾ ನಗರ/ಜಿಲ್ಲಾ ಕೇಂದ್ರ ಗ್ರಂಥಾಲಯದ ಮುಖ್ಯ ಗ್ರಂಥಾಲಯಾಧಿಕಾರಿಗಳು. (ನಿರ್ದೇಶಕರ ಮುಖಾಂತರ)
3) ಪುಸ್ತಕ ಆಯ್ಕೆ ಸಮಿತಿಯ ಎಲ್ಲಾ ಸದಸ್ಯರುಗಳಿಗೆ. (ನಿರ್ದೇಶಕರ ಮುಖಾಂತರ)
4) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

## ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 378 ಎಲ್‌ಪಿಬಿ 2009

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:09.11.2009

### ಸೇರ್ಪಡೆ ಆದೇಶ

ಸರ್ಕಾರದ ದಿನಾಂಕ:17.11.2007ರ ಸೇರ್ಪಡೆ ಆದೇಶ ಸಂಖ್ಯೆ ಇಡಿ 231 ಎಲ್‌ಪಿಬಿ 2006ರ ಕ್ರಮ ಸಂಖ್ಯೆ 15ರಲ್ಲಿ 2ನೇ ಸಾಲಿನಲ್ಲಿಯ "ಲೇಖಕರು/ ಲೇಖಕ ಪ್ರಕಾಶಕರು" ಎಂಬ ಪದಗಳ ಬದಲಾಗಿ "ಲೇಖಕರು/ಲೇಖಕ ಪ್ರಕಾಶಕರು ಹಾಗೂ ಪ್ರಕಾಶಕರು" ಎಂಬುದಾಗಿ ಸೇರ್ಪಡೆ ಮಾಡಿಕೊಂಡು ಓದತಕ್ಕದ್ದು.

(ಎಂ.ಎನ್ ಸೋಮಶೇಖರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ(ಆಡಳಿತ)

ಇವರಿಗೆ:-
ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು – ಮುಂದಿನ ರಾಜ್ಯ ಪತ್ರಿಕೆಯಲ್ಲಿ ಪ್ರಕಟಿಸಿ, ಅದರ 250 ಪ್ರತಿಗಳನ್ನು ಸರ್ಕಾರಕ್ಕೆ ಹಾಗೂ 500 ಪ್ರತಿಗಳನ್ನು ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಇವರಿಗೆ ಕಳುಹಿಸುವಂತೆ ಕೋರಲಾಗಿದೆ.

ಪ್ರತಿಗಳು:-

1) ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು
2) ರಾಜ್ಯದ ಎಲ್ಲಾ ನಗರ/ಜಿಲ್ಲಾ ಕೇಂದ್ರ ಗ್ರಂಥಾಲಯದ ಮುಖ್ಯ ಗ್ರಂಥಾಲಯಾಧಿಕಾರಿಗಳು (ನಿರ್ದೇಶಕರ ಮುಖಾಂತರ),
3) ಪುಸ್ತಕ ಆಯ್ಕೆ ಸಮಿತಿಯ ಎಲ್ಲಾ ಸದಸ್ಯರುಗಳಿಗೆ ನಿರ್ದೇಶಕರ ಮುಖಾಂತರ)
4) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸಾರ್ವಜನಿಕ ಗ್ರಂಥಾಲಯ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಗ್ರಂಥಾಲಯಗಳಿಗಾಗಿ ಖರೀದಿಸುವ ಪುಸ್ತಕಗಳ ಬೆಲೆ ಪರಿಷ್ಕರಣೆ ಬಗ್ಗೆ

ಓದಲಾಗಿದೆ:
1) ದಿನಾಂಕ:07-02-2005ರ ಸರ್ಕಾರದ ಆದೇಶ ಸಂಖ್ಯೆ: ಇಡಿ 1 ಎಲ್‌ಬಿಪಿ 2004.
2) ದಿನಾಂಕ 27-11-2006ರ ಸರ್ಕಾರದ ಆದೇಶ ಸಂಖ್ಯೆ: ಇಡಿ 170 ಎಲ್‌ಬಿಬಿ 2006 -
3) ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಇವರ ಏಕ ಕಡತ ಸಂಖ್ಯೆ: ಸಾಗ್ರಂಇ:ನಿಕ:ಪುಬೆಪಿ.16/2009-20, ದಿನಾಂಕ 06-08-2009
4) ದಿನಾಂಕ:09-11-2009ರಂದು ಸರ್ಕಾರದ ಉಪ ಕಾರ್ಯದರ್ಶಿ (ಆಡಳಿತ) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.

**ಪ್ರಸ್ತಾವನೆ-**

ಮೇಲೆ (1)ರಲ್ಲಿ ಓದಲಾದ ಸರ್ಕಾರದ ದಿನಾಂಕ:07-02-2005ರ ಆದೇಶದನ್ವಯ, ಸಾರ್ವಜನಿಕ ಗ್ರಂಥಾಲಯ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಗ್ರಂಥಾಲಯಗಳಿಗಾಗಿ ಪುಸ್ತಕ ಆಯ್ಕೆ ಮತ್ತು ಖರೀದಿಗೆ ಸಂಬಂಧಿಸಿದ ವ್ಯಾಪಕವಾದ ಮಾರ್ಗಸೂಚಿಗಳನ್ನು ನೀಡಲಾಗಿದೆ. ಮೇಲೆ (2)ರಲ್ಲಿ ಓದಲಾದ ದಿನಾಂಕ: 27-11-2006ರ ಆದೇಶದಲ್ಲಿ ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ಖರೀದಿಸುವ ಪುಸ್ತಕಗಳಿಗೆ ಬೆಲೆ ನಿಗಧಿಪಡಿಸಿ ಆದೇಶಿಸಲಾಗಿದೆ. ಸದರಿ ಬೆಲೆಯನ್ನು ನಿಗಧಿಪಡಿಸಿ ಈಗಾಗಲೇ 3 ವರ್ಷಗಳು ಕಳೆದಿದ್ದು, ಈ ಸಮಯದಲ್ಲಿ ಮಾರುಕಟ್ಟೆಯಲ್ಲಿ ಕಾಗದದ ಬೆಲೆ, ಡಿಟಿಪಿ ವೆಚ್ಚ, ವಿದ್ಯುತ್‌ದರ, ಬಾಡಿಗೆ ಸಾಗಣಿಕೆ ವೆಚ್ಚಗಳು ಹೆಚ್ಚಾಗಿರುವುದರಿಂದ ಸದ್ಯದಲ್ಲಿ ಚಾಲ್ತಿಯಲ್ಲಿರುವ ದರಗಳನ್ನು ಪರಿಶೀಲಿಸುವ ಕುರಿತು ಸಂಘ ಸಂಸ್ಥೆಗಳಿಂದ ಲೇಖಕ ಪ್ರಕಾಶಕರಿಂದ ಮನವಿಗಳು ಬಂದಿದ್ದು, ಲೇಖಕ ಪ್ರಕಾಶಕರು, ಸಂಘಸಂಸ್ಥೆಗಳು ಪರಿಷ್ಕರಿಸಲು ಸೂಚಿಸಿದ ದರಗಳನ್ನು ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿ ಸಭೆಯಲ್ಲಿ ಚರ್ಚಿಸಿ ಅನುಮೋದನೆ ನೀಡಲಾಗಿದೆ ಎಂದು ತಿಳಿಸುತ್ತಾ, ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಯಾದ ಪುಸ್ತಕಗಳಿಗೆ ಬೆಲೆಯನ್ನು ಪರಿಷ್ಕರಿಸಿ ನಿಗದಿಪಡಿಸಿರುವ ಬಗ್ಗೆ ಮೇಲೆ (3)ರಲ್ಲಿ ಓದಲಾದ ಏಕ ಕಡತದನ್ವಯ ಗ್ರಂಥಾಲಯ ಇಲಾಖೆಯ ನಿರ್ದೇಶಕರು ಕೋರಿರುವರು. ಈ ಸಂಬಂಧವಾಗಿ ಮೇಲೆ (4)ರಲ್ಲಿ ಓದಲಾದ ದಿನಾಂಕ 09-11-2009ರ ಸಭೆಯಲ್ಲಿ ಚರ್ಚಿಸಿ ಹಾಗೂ ಪರಿಷ್ಕೃತ ಬೆಲೆಯ ಕುರಿತು ಸರ್ಕಾರಿ ಮುದ್ರಣ ಇಲಾಖೆಯ ಅಭಿಪ್ರಾಯವನ್ನು ಪಡೆದು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

### ಸರ್ಕಾರದ ಆದೇಶ ಸಂಖ್ಯೆ: ಇಡಿ 283 ಎಲ್‌ಬಿಬಿ 2009, ಬೆಂಗಳೂರು
### ದಿನಾಂಕ: 14-06-2010

3. ಮೇಲೆ (2)ರಲ್ಲಿ ಓದಲಾದ ದಿನಾಂಕ: 27-11-2006ರ ಸರ್ಕಾರದ ಆದೇಶದಲ್ಲಿ ನಿಗಧಿಪಡಿಸಲಾದ ದರಗಳನ್ನು ಪರಿಷ್ಕರಿಸಿ ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ಈ ಆದೇಶದ ದಿನಾಂಕದಿಂದ ಮುಂದಕ್ಕೆ ಆಯ್ಕೆ ಮಾಡಿ, ಖರೀದಿಸುವ ಪುಸ್ತಕಗಳಿಗೆ, ಈ ಕೆಳಕಂಡ ಬೆಲೆಗಳನ್ನು ನಿಗದಿಪಡಿಸಿ ಆದೇಶಿಸಿದೆ.

| ಕ್ರ.ಸಂ | ಪುಸ್ತಕದ ಅಳತೆ | ಕಾಗದದ ಗುಣಮಟ್ಟ | ಒಂದುಪುಟಕ್ಕೆ ನಿಗದಿಪಡಿಸಿದ ಬೆಲೆ |
|---|---|---|---|
| 1 | 1/8 ಕ್ರೌನ್ | ಸಾದಾ (ಬಿಳಿಹಾಳೆ) ಕಾಗದ | 0.30 ಪೈಸೆ |
| 2 | 1/8 ಕ್ರೌನ್ | ಉತ್ತಮ (ಮ್ಯಾಪ್ಲಿತೋ) ಕಾಗದ | 0.40 ಪೈಸೆ |
| 3 | 1/8 ಡೆಮ್ಮಿ | ಸಾದಾ (ಬಿಳಿಹಾಳೆ) ಕಾಗದ | 0.40 ಪೈಸೆ |
| 4 | 1/8 ಡೆಮ್ಮಿ | ಉತ್ತಮ (ಮ್ಯಾಪ್ಲಿತೋ) ಕಾಗದ | 0.50 ಪೈಸೆ |
| 5 | 1/4 ಕ್ರೌನ್ | ಸಾದಾ (ಬಿಳಿಹಾಳೆ) ಕಾಗದ | 0.60 ಪೈಸೆ |

| | | | |
|---|---|---|---|
| 6 | 1/4 ಕ್ರೌನ್ | ಉತ್ತಮ (ಮ್ಯಾಪ್ಲಿತೋ) ಕಾಗದ | 0.80 ಪೈಸೆ |
| 7 | 1/4 ಡೆಮ್ಮಿ | ಸಾದಾ (ಬಿಳಿಹಾಳೆ) ಕಾಗದ | 0.80 ಪೈಸೆ |
| 8 | 1/4 ಡೆಮ್ಮಿ | ಉತ್ತಮ (ಮ್ಯಾಪ್ಲಿತೋ) ಕಾಗದ | 1.00 |
| | | | |
| 1 | Crown 1/8 | Art Paper 90 gsm Black & White Printing (ಪ್ರತಿ ಪುಟಕ್ಕೆ) | ರೂ.0.70 |
| 2 | Crown ¼ | Art Paper 90 gsm Black & White Printing (ಪ್ರತಿ ಪುಟಕ್ಕೆ) | ರೂ.1.20 |
| 3 | Crown 1/8 | Art Paper 90 gsm Four Colour Printing (ಪ್ರತಿ ಪುಟಕ್ಕೆ) | ರೂ.1.40 |
| 4 | Crown 1/4 | Art Paper 90 gsm Four Colour Printing (ಪ್ರತಿ ಪುಟಕ್ಕೆ) | ರೂ.2.50 |
| 5 | Demy 1/8 | Art Paper 90 gsm Black & White Printing (ಪ್ರತಿ ಪುಟಕ್ಕೆ) | ರೂ.0.80 |
| 6 | Demy ¼ | Art Paper 90 gsm Black & White Printing (ಪ್ರತಿ ಪುಟಕ್ಕೆ) | ರೂ.1.40 |
| 7 | Demy 1/8 | Art Paper 90 gsm Four Colour Printing (ಪ್ರತಿ ಪುಟಕ್ಕೆ) | ರೂ.1.80 |
| 8 | Demy 1/4 | Art Paper 90 gsm Four Colour Printing (ಪ್ರತಿ ಪುಟಕ್ಕೆ) | ರೂ.2.75 |

9. Case Binding crown & Demy 1/8 Rs. 20-00
Crown & Demy ¼ Rs. 25-00

ಇನ್ನುಳಿದ ಇತರೆ ನಿಬಂಧನೆಗಳು ಆದೇಶ ಸಂಖ್ಯೆ: ಇಡಿ 170 ಎಲ್‌ಎಬಿ 2006, ದಿನಾಂಕ 27-11-2006ರಲ್ಲಿರುವಂತೆ ಮುಂದುವರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ
(ಎಂ.ಎನ್.ಸೋಮಶೇಖರ್)
ಸರ್ಕಾರದ ಅಧೀನ ಕಾರ್ಯದರ್ಶಿಗಳು
ಶಿಕ್ಷಣ ಇಲಾಖೆ.

**ಇವರಿಗೆ**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ 500 ಪ್ರತಿಗಳನ್ನು ಶಿಕ್ಷಣ ಇಲಾಖೆ ಹಾಗೂ 200 ಪ್ರತಿಗಳನ್ನು ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಸರಬರಾಜು ಮಾಡಲು ಕೋರಲಾಗಿದೆ.

**ಪ್ರತಿಗಳು:-**

1) ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು.
2) ಅಧ್ಯಕ್ಷರು, ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿ, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು (ನಿರ್ದೇಶಕರ ಮುಖಾಂತರ).
3) ಮಾಹಿತಿ ಕೇಂದ್ರ, ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
4) ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿ.

ಸಂಖ್ಯೆ 721
27 DEC 2017

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಸಾರ್ವಜನಿಕ ಗ್ರಂಥಾಲಯ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಗ್ರಂಥಾಲಯಗಳಲ್ಲಿ ಖರೀದಿಸುವ ಪುಸ್ತಕಗಳ ಬೆಲೆ ಪರಿಷ್ಕರಿಸುವ ಬಗ್ಗೆ

ಓದಲಾಗಿದೆ:- 1) ಸರ್ಕಾರದ ಆದೇಶ ಸಂಖ್ಯೆ:ಇಡಿ 283 ಎಲ್‌ಎಬಿ 2009, ಬೆಂಗಳೂರು, ದಿನಾಂಕ:14.06.2010.

2) ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ:ಸಾಗ್ರಂಇ/ನಿಕ/ಪುಖವಿ/2016-17/4716, ದಿನಾಂಕ:08.11.2017.

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ಸರ್ಕಾರಿ ಆದೇಶದಲ್ಲಿ ದಿನಾಂಕ:27.11.2006 ರಲ್ಲಿ ನಿಗದಿಪಡಿಸಲಾದ ಪುಸ್ತಕ ಬೆಲೆಯ ದರಗಳನ್ನು ಪರಿಷ್ಕರಿಸಿ ಆದೇಶ ಹೊರಡಿಸಿದ ದಿನಾಂಕದಿಂದ ಮುಂದಕ್ಕೆ ಆಯ್ಕೆ ಮಾಡಿ ಖರೀದಿಸುವ ಪುಸ್ತಕಗಳಿಗೆ ಬೆಲೆಯನ್ನು ನಿಗದಿಪಡಿಸಿ ಆದೇಶ ಹೊರಡಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(2)ರ ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು ಇವರು ಕರ್ನಾಟಕ ಕನ್ನಡ ಬರಹಗಾರರು ಮತ್ತು ಪ್ರಕಾಶಕರ ಸಂಘ(ರಿ), ಬೆಂಗಳೂರು ಇವರು ಸಲ್ಲಿಸಿರುವ ಮನವಿಗಳನ್ವಯ ಹಾಗೂ ದಿನಾಂಕ:25.06.2015 ರಂದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯ ಸಭೆಯ ನಡವಳಿಗಳ ತೀರ್ಮಾನದಂತೆ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಗ್ರಂಥಾಲಯಗಳಲ್ಲಿ ಖರೀದಿಸುವ ಪುಸ್ತಕಗಳ ಬೆಲೆಯನ್ನು ಪರಿಷ್ಕರಿಸಿ ಈ ಕೆಳಕಂಡಂತೆ ಪರಿಷ್ಕೃತ ಬೆಲೆಯನ್ನು ನಿಗದಿಪಡಿಸಿ ಆದೇಶ ಹೊಡಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

| ಕ್ರಸಂ. | ಪುಸ್ತಕದ ಅಳತೆ | ಕಾಗದದ ಗುಣಮಟ್ಟ | ಈಗಿರುವ ಬೆಲೆ | ಒಂದುಮಟ್ಟಕ್ಕೆ ನಿಗದಿಪಡಿಸಬಹುದಾದ ಬೆಲೆ |
|---|---|---|---|---|
| 1. | 1/8 ಕ್ರೌನ್ | ಸಾದಾ (ಬಿಳಿಹಾಳೆ) ಕಾಗದ | 0.30ಪೈಸೆ | 0.50 ಪೈಸೆ |
| 2. | 1/8 ಕ್ರೌನ್ | ಉತ್ತಮ (ಮ್ಯಾಪ್ಲಿತೋ) ಕಾಗದ | 0.40 ಪೈಸೆ | 0.60 ಪೈಸೆ |
| 3. | 1/8 ಡೆಮ್ಮಿ | ಸಾದಾ (ಬಿಳಿಹಾಳೆ) ಕಾಗದ | 0.40 ಪೈಸೆ | 0.60ಪೈಸೆ |
| 4. | 1/8 ಡೆಮ್ಮಿ | ಉತ್ತಮ (ಮ್ಯಾಪ್ಲಿತೋ) ಕಾಗದ | 0.50 ಪೈಸೆ | 0.70 ಪೈಸೆ |
| 5. | 1/4 ಕ್ರೌನ್ | ಉತ್ತಮ (ಮ್ಯಾಪ್ಲಿತೋ) ಕಾಗದ | 0.80 ಪೈಸೆ | 1.00ಪೈಸೆ |
| 6. | 1/4 ಡೆಮ್ಮಿ | ಸಾದಾ (ಬಿಳಿಹಾಳೆ) ಕಾಗದ | 0.80 ಪೈಸೆ | 1.00 ಪೈಸೆ |
| 7. | 1/4 ಡೆಮ್ಮಿ | ಉತ್ತಮ (ಮ್ಯಾಪ್ಲಿತೋ) ಕಾಗದ | ರೂ. 1.00 | 1.20 ಪೈಸೆ |
| 8. | Case Binding Crown & demy 1/8 | | ರೂ. 20.00 | ರೂ. 35.00 |
| 9. | Case Binding Crown & demy ¼ | | ರೂ. 25.00 | ರೂ. 40.00 |

ಈ ಮೇರೆಗೆ ಸರ್ಕಾರವು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ:ಇಡಿ 234 ಎಲ್‌ಬಿಬಿ 2015, ಬೆಂಗಳೂರು, ದಿನಾಂಕ:22.12.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕೂಲಂಕಷವಾಗಿ ಪರಿಶೀಲಿಸಿ, ದಿನಾಂಕ:01.04.2018 ರಿಂದ ಮುದ್ರಣಗೊಳ್ಳುವ ಹಾಗೂ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಪುಸ್ತಕ ಖರೀದಿ ಸಮಿತಿಯ ಶಿಫಾರಸಿನ ಅನ್ವಯ ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಸರಬರಾಜಾಗುವ ಪುಸ್ತಕಗಳ ಪ್ರತಿ ಪುಟಕ್ಕೆ 20ಪೈಸೆ ಹೆಚ್ಚಿಸಲು(ಇಪ್ಪತ್ತು ಪೈಸೆಗಳು ಮಾತ್ರ) ಅನುಮೋದನೆ ನೀಡಿದೆ.

ಇನ್ನುಳಿದ ಇತರೆ ನಿಬಂಧನೆಗಳು ಆದೇಶ ಸಂಖ್ಯೆ: ಇಡಿ 170 ಎಲ್‌ಬಿಬಿ 2006 27.11.2006ರಲ್ಲಿರುವಂತೆ ಮುಂದುವರೆಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,
ಶೇಖರ 24/12/2017
(ಶೇಖರ)
ಸರ್ಕಾರದ ಅಧೀನ ಕಾರ್ಯದರ್ಶಿ
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ(ಸಾಮಾನ್ಯ)

ಇವರಿಗೆ:-

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ಬೆಂಗಳೂರು ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ 500 ಪ್ರತಿಗಳನ್ನು ಶಿಕ್ಷಣ ಇಲಾಖೆ ಹಾಗೂ 200 ಪ್ರತಿಗಳನ್ನು ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಸರಬರಾಜು ಮಾಡಲು ಕೋರಲಾಗಿದೆ.

ಇವರಿಗೆ:-

1) ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು
2) ಅಧ್ಯಕ್ಷರು, ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿ, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು (ನಿರ್ದೇಶಕರ ಮುಖಾಂತರ)
3) ಮಾಹಿತಿ ಕೇಂದ್ರ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
4) ಶಾಖಾ ರಕ್ಷಾ ಕಡತ // ಹೆಚ್ಚುವರಿ ಪ್ರತಿಗಳು.

SO 26/12/2017

13 APR 2018
ಬೆಂಗಳೂರು-1

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯ ಉನ್ನತ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಯಾದ ಕನ್ನಡ ಪುಸ್ತಕಗಳ ಬೆಲೆ ನಿಗಧಿ ಪಡಿಸಿದಂತೆ ಆಂಗ್ಲ ಮತ್ತು ಭಾರತೀಯ ಇತರೆ ಭಾಷೆಯ ಪುಸ್ತಕಗಳಿಗೂ ಬೆಲೆ ನಿಗಧಿ ಪಡಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ:170 ಎಲ್ಐಬಿ 2006, ದಿನಾಂಕ:27.11.2006.
2. ನಿರ್ದೇಶಕರ ಪತ್ರ ಸಂಖ್ಯೆ:ಸಾಗ್ರಂಇ/ನಿಕ/ಪೂಖಿವಿ/ಆಭಾಬೆನಿ/ 4/2017-18, ದಿನಾಂಕ:29.12.2017 ಮತ್ತು 17.01.2018.

<<*****>>

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ಸರ್ಕಾರಿ ಆದೇಶದಲ್ಲಿ ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಸರಬರಾಜು ಆಗುವ ಆಂಗ್ಲ ಮತ್ತು ಇತರೆ ಭಾಷೆಯ ಪುಸ್ತಕಗಳನ್ನು ಖರೀದಿಸುವಲ್ಲಿ ಈ ಕೆಳಕಂಡ ಬೆಲೆಯನ್ನು ನಿಗದಿಪಡಿಸಲಾಗಿತ್ತು.

*1) ಭಾರತೀಯ ಇತರೆ ಭಾಷೆಯ ಪುಸ್ತಕಗಳಿಗೆ ಮುಖ ಪುಟದ ಬೆಲೆ ಶೇ. 25ರ ಸೋಡಿ.*
*2) ಆಂಗ್ಲ ಭಾಷೆಯ ಪುಸ್ತಕಗಳಿಗೆ (ಪ್ರಚಲಿತ ವರ್ಷದಲ್ಲಿ ಪ್ರಕಟಗೊಂಡಿದ್ದು) ಮುಖ ಪುಟದ ಬೆಲೆ ಮೇಲೆ ಶೇ. 20ರ ಸೋಡಿ.*

ಮೇಲೆ ಓದಲಾದ ಕ್ರಮ ಸಂಖ್ಯೆ(2)ರ ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು ಇವರ ದಿನಂಕ:29.12.2017ರ ಪತ್ರದಲ್ಲಿ ಕನ್ನಡ ಭಾಷಾ ಪುಸ್ತಕಗಳಿಗೆ ಸರ್ಕಾರದ ಆದೇಶ ಸಂಖ್ಯೆ ಇಡಿ 234 ಎಲ್ಐಬಿ 2015, ಬೆಂಗಳೂರು ದಿನಾಂಕ:22.12.2017 ಮತ್ತು ತಿದ್ದುಪಡಿ ಆದೇಶದನ್ವಯ ಕನ್ನಡ ಪುಸ್ತಕಗಳಿಗೆ ಪುಟವಾರು ಬೆಲೆ ನಿಗದಿಪಡಿಸಿದಂತೆ ಆಂಗ್ಲ ಮತ್ತು ಇತರೆ ಭಾಷೆಯ ಪುಸ್ತಕಗಳಿಗೂ ಅನ್ವಯಿಸುವಂತೆ ಬೆಲೆ ನಿಗದಿಪಡಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 84 ಎಲ್ಐಬಿ 2017 ಬೆಂಗಳೂರು, ದಿನಾಂಕ:06.04.2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರದ ಆದೇಶ ಸಂಖ್ಯೆ:ಇಡಿ 170 ಎಲ್ಐಬಿ 2006, ದಿನಾಂಕ:27.11.2006ರಲ್ಲಿ ರಾಜ್ಯ ಉನ್ನತ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಯಾದ ಆಂಗ್ಲ ಮತ್ತು ಇತರೆ ಭಾಷೆ

ಪುಸ್ತಕಗಳ ಮುಖ ಪುಟದ ಬೆಲೆ ಮೇಲೆ ಶೇ.20% ಕೂಡಿ ನಿಗದಿಪಡಿಸಿ ಖರೀದಿಸಲಾಗುತ್ತಿರುವ ಬೆಲೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿ ಸರ್ಕಾರಿ ಆದೇಶ ಸಂಖ್ಯೆ:ಇಡಿ 234 ಎಲ್‌ಬಿಬಿ 2015, ದಿನಾಂಕ:22.12.217 ಮತ್ತು ಸರ್ಕಾರಿ ಆದೇಶ ಸಂಖ್ಯೆ: ಇಡಿ 234 ಎಲ್‌ಬಿಬಿ 2015 ದಿನಾಂಕ:26.02.2018ರ ತಿದ್ದುಪಡಿ ಆದೇಶಗಳಂತೆ ರಾಜ್ಯ ಉನ್ನತ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಯಾಗಿ ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಸರಬರಾಜು ಆಗುವ ಕನ್ನಡ ಪುಸ್ತಕಗಳಿಗೆ ನಿಗದಿ ಪಡಿಸಿರುವ ಪ್ರತಿ ಪುಟಕ್ಕೆ ದರಗಳನ್ನೇ ಅನುಸರಿಸಿ ಆಂಗ್ಲ ಮತ್ತು ಭಾರತೀಯ ಇತರ ಭಾಷೆ ಪುಸ್ತಕಗಳ ಖರೀದಿಗೆ ಅನುಸರಿಸಲು ಸರ್ಕಾರದ ಮಂಜೂರಾತಿ ನೀಡಿದೆ.

ಇನ್ನುಳಿದ ಇತರ ನಿಬಂಧನೆಗಳು ಆದೇಶ ಸಂಖ್ಯೆ:ಇಡಿ 170 ಎಲ್‌ಬಿಬಿ 2006 27.11.2006ರಲ್ಲಿರುವಂತೆ ಮುಂದುವರೆಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ.

(ಅನಂತಪದ್ಮನಾಭ ಹೆಚ್.ಆರ್) 6/4/18
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ(ಸಾಮಾನ್ಯ)

ಇವರಿಗೆ:-
ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ಬೆಂಗಳೂರು ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ 200 ಪ್ರತಿಗಳನ್ನು ಶಿಕ್ಷಣ ಇಲಾಖೆ ಹಾಗೂ 200 ಪ್ರತಿಗಳನ್ನು ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಸರಬರಾಜು ಮಾಡಲು ಕೋರಲಾಗಿದೆ.

ಇವರಿಗೆ:-
1) ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು
2) ಅಧ್ಯಕ್ಷರು, ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿ, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು (ನಿರ್ದೇಶಕರ ಮುಖಾಂತರ)
3) ಮಾಹಿತಿ ಕೇಂದ್ರ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
4) ಶಾಖಾ ರಕ್ಷಾ ಕಡತ // ಹೆಚ್ಚುವರಿ ಪ್ರತಿಗಳು.

ನಿರ್ದೇಶಕರವರ ಕಛೇರಿ ಸಾರ್ವಜನಿಕ ಗ್ರಂಥಾಲಯ ಇಲಾಖೆ
ಸಂಖ್ಯೆ: SHS
16 OCT 2018

# ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 234 ಎಲ್‌ಐಬಿ 2015

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:05.10.2018

## ಸೇರ್ಪಡೆ

ಸರ್ಕಾರದ ಆದೇಶ ಸಂಖ್ಯೆ: ಇಡಿ 234 ಎಲ್‌ಐಬಿ 2015, ದಿನಾಂಕ:22.12.2017ರ ಆದೇಶ ಭಾಗದಲ್ಲಿ ತಿಳಿಸಿರುವ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಗ್ರಂಥಾಲಯಗಳಲ್ಲಿ ಖರೀದಿಸುವ ಪುಸ್ತಕಗಳ ಬೆಲೆಯನ್ನು ಪರಿಷ್ಕರಿಸಿ ಆದೇಶಿಸಿದ್ದು, ಕ್ರಮ ಸಂಖ್ಯೆ: 9ರ ನಂತರ ಈ ಕೆಳಗೆ ತಿಳಿಸಿರುವ ಪುಸ್ತಕದ ಅಳತೆಯ ಕಾಗದದ ಬೆಲೆಯನ್ನು ಪರಿಷ್ಕರಿಸಿ ಕ್ರಮ ಸಂಖ್ಯೆ: 10 ಎಂದು ಸೇರ್ಪಡೆ ಮಾಡಿದೆ.

| ಕ್ರಸಂ. | ಪುಸ್ತಕದ ಅಳತೆ | ಕಾಗದದ ಗುಣಮಟ್ಟ | ಈಗಿರುವ ಬೆಲೆ | ಒಂದು ಪುಟಕ್ಕೆ ನಿಗದಿಪಡಿಸಲಾದ ಬೆಲೆ |
|---|---|---|---|---|
| 1 | 1/4 ಕ್ರೌನ್ | ಸಾದಾ (ಬಿಳಿ ಹಾಳೆ) ಕಾಗದ | 0.60 ಪೈಸೆ | 0.80 ಪೈಸೆ |

ಉಳಿದಂತೆ ದಿನಾಂಕ: 22.12.2017ರ ಆದೇಶದಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

05/10/2018
(ಶೇಖರ)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ),
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ(ಸಾಮಾನ್ಯ).

ಇವರಿಗೆ:-

1. ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು
2. ಅಧ್ಯಕ್ಷರು, ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿ, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು (ನಿರ್ದೇಶಕರ ಮುಖಾಂತರ)
3. ಮಾಹಿತಿ ಕೇಂದ್ರ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
4. ಶಾಖಾ ರಕ್ಷಾ ಕಡತ // ಹೆಚ್ಚುವರಿ ಪ್ರತಿಗಳು.

12/10/2018

# **ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:-** ಪುಸ್ತಕಗಳ ಆಯ್ಕೆ ಮತ್ತು ಖರೀದಿ ವಿಧಾನ ಮಾರ್ಗಸೂಚಿಗಳನ್ನು ಪರಿಷ್ಕರಿಸುವ ಬಗ್ಗೆ.

**ಓದಲಾಗಿದೆ:-**

1. ಸರ್ಕಾರದ ಆದೇಶ ಸಂಖ್ಯೆ. ಇಡಿ 01 ಎಲ್‌ಬಿಪಿ 2004, ದಿನಾಂಕ 07.02.2005
2. ಸರ್ಕಾರದ ಆದೇಶ ಸಂಖ್ಯೆ: ಇಡಿ 68 ಎಲ್‌ಐಬಿ 2005, ದಿನಾಂಕ 02.09.2006
3. ಸರ್ಕಾರದ ಆದೇಶ ಸಂಖ್ಯೆ: ಇಡಿ 170 ಎಲ್‌ಐಬಿ 2006, ದಿನಾಂಕ 27.11.2006
4. ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ: ಇಡಿ 231 ಎಲ್‌ಐಬಿ 2006, ದಿನಾಂಕ 17.11.2007
5. ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ: ಇಡಿ 378 ಎಲ್‌ಐಬಿ 2009, ದಿನಾಂಕ 09.11.2009
6. ಸರ್ಕಾರದ ಆದೇಶ ಸಂಖ್ಯೆ. ಇಡಿ 283 ಎಲ್‌ಐಬಿ 2009, ದಿನಾಂಕ 14.06.2010
7. ಸರ್ಕಾರದ ಆದೇಶ ಸಂಖ್ಯೆ: ಇಡಿ 234 ಎಲ್‌ಐಬಿ 2015, ದಿನಾಂಕ 22.12.2017
8. ಸರ್ಕಾರದ ಆದೇಶ ಸಂಖ್ಯೆ: ಇಡಿ 84 ಎಲ್‌ಐಬಿ 2017, ದಿನಾಂಕ 06.04.2018
9. ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ: ಇಡಿ 234 ಎಲ್‌ಐಬಿ 2015, ದಿನಾಂಕ 05.10.2018
10. ಆಯುಕ್ತರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಇವರ ಏಕ ಕಡತ ಪ್ರಸ್ತಾವನೆ ಸಂಖ್ಯೆ: DPL/BOS/41/2025-BOS

*******

**ಪ್ರಸ್ತಾವನೆ:**

ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಗ್ರಂಥಾಲಯಗಳಲ್ಲಿ ಉತ್ತಮ ಮೌಲ್ಯದ ಗ್ರಂಥಗಳನ್ನು ಸಂಗ್ರಹಿಸಿಡುವ ಹಾಗೂ ಸಾರ್ವಜನಿಕ ಓದುಗರ ಅಭಿರುಚಿಗೆ ಅನುಸಾರವಾಗಿ ಗ್ರಂಥಗಳನ್ನು ಒದಗಿಸುವ ದೃಷ್ಟಿಯಿಂದ ಪುಸ್ತಕ ಆಯ್ಕೆ ಮತ್ತು ಖರೀದಿ ಕಾರ್ಯ ವಿಧಾನವನ್ನು ಪುನರ್ ಅವಲೋಕಿಸಿ, ಅದನ್ನು ಪರಿಷ್ಕರಿಸುವುದು ಅವಶ್ಯವೆಂದು ತೀರ್ಮಾನಿಸಿ ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಅನುಬಂಧ-1, ಅನುಬಂಧ-2 ಹಾಗೂ ಅನುಬಂಧ-3ರಲ್ಲಿ ಒಳಗೊಂಡಂತೆ ಪುಸ್ತಕ ಆಯ್ಕೆ ಮತ್ತು ಖರೀದಿಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2), (3), (4), (5), (6), (7), (8) ಮತ್ತು (9)ರ ಆದೇಶ/ ಸೇರ್ಪಡೆ ಆದೇಶಗಳಲ್ಲಿ ಪುಸ್ತಕಗಳ ಬೆಲೆ ಪರಿಷ್ಕರಣೆ ಹಾಗೂ ಪುಸ್ತಕ ಆಯ್ಕೆ ಮತ್ತು ಖರೀದಿಗೆ ಸಂಬಂಧಿಸಿದಂತೆ ಹೆಚ್ಚುವರಿ ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ.

ಪುಸ್ತಕ ಆಯ್ಕೆ ಮತ್ತು ಖರೀದಿಗೆ ಸಂಬಂಧಿಸಿದ ಮಾರ್ಗಸೂಚಿಗಳು 20 ವರ್ಷಗಳ ಹಿಂದೆ ಜಾರಿಯಾಗಿದ್ದರಿಂದ, ಆಯುಕ್ತರು ಸಾರ್ವಜನಿಕ ಗ್ರಂಥಾಲಯ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ, ರಾಜ್ಯದ ಕಂದಾಯ ವಿಭಾಗದ ಹಿರಿಯ ಅಧಿಕಾರಿಗಳೊಂದಿಗೆ ನಡೆಸಿದ ಸಭೆಯಲ್ಲಿ ನಿರ್ಣಯ ಕೈಗೊಂಡು, ಪುಸ್ತಕಗಳ ಆಯ್ಕೆ ಮತ್ತು ಖರೀದಿ ವಿಧಾನ ಮಾರ್ಗಸೂಚಿಗಳಲ್ಲಿನ ಕೆಲವು ಅಂಶಗಳನ್ನು ಪರಿಷ್ಕರಿಸುವ ಸಂಬಂಧ ಮೇಲೆ ಓದಲಾದ ಕ್ರಮ ಸಂಖ್ಯೆ (10)ರ ಏಕ ಕಡತದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಕೆಯಾಗಿರುತ್ತದೆ.

ಅದರಂತೆ, ಆಯುಕ್ತರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು ರವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ

**ಸರ್ಕಾರದ ಆದೇಶ ಸಂಖ್ಯೆ: ಇಡಿ 10[illegible] ಎಲ್‌ಬಿಪಿ 2025,**

**ಬೆಂಗಳೂರು ದಿನಾಂಕ: 18.02.2026**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಮೇಲೆ (1)ರಲ್ಲಿ ಓದಲಾದ ದಿನಾಂಕ 07.02.2005ರ ಸರ್ಕಾರದ ಆದೇಶದ ಅನುಬಂಧ-3ರಲ್ಲಿನ ಕ್ರ.ಸಂ.03ರ (ಅ), (ಆ), (ಇ), (ಈ) ಮತ್ತು ಕ್ರ.ಸಂ.04 ಹಾಗೂ ಮೇಲೆ (3)ರಲ್ಲಿ ಓದಲಾದ ದಿನಾಂಕ 27.11.2006ರ ಸರ್ಕಾರದ ಆದೇಶದ ಕ್ರ.ಸಂ 04 ಅನ್ನು ಮಾರ್ಪಡಿಸಿ ಈ ಕೆಳಕಂಡಂತೆ ಆದೇಶಿಸಿದೆ.

1) ಸಾರ್ವಜನಿಕ ಗ್ರಂಥಾಲಯಗಳಲ್ಲಿ ಪ್ರಸ್ತುತ ಸಂಗ್ರಹಿಸಲಾಗುತ್ತಿರುವ ವಿವಿಧ ಪುಸ್ತಕಗಳ ಖರೀದಿ ಶೇಕಡಾವಾರು ಪ್ರಕಾರಗಳ ಮಿತಿಯನ್ನು ಈ ಕೆಳಕಂಡಂತೆ ಪರಿಷ್ಕರಿಸಿ ನಿಗದಿಪಡಿಸಿದೆ

| ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಯಾದ ಪುಸ್ತಕಗಳ ಆಯ್ಕೆ ಪಟ್ಟಿಯಿಂದ | | |
|---|---|---|
| | | ಶೇಖಡಾವಾರು |
| 1 | ಸಾಹಿತ್ಯ | 20% |
| 2 | ಮಕ್ಕಳ ಸಾಹಿತ್ಯ | 10% |
| 3 | ಕಲೆ (ಕ್ರೀಡಾ ಸಾಹಿತ್ಯ ಒಳಗೊಂಡಂತೆ) | 10% |
| 4 | ವಿಜ್ಞಾನ ವೃತ್ತಿ ಶಿಕ್ಷಣ ಕೌಶಲಾಭಿವೃದ್ಧಿ ಆದಾಯ ಉತ್ಪಾದನೆ ಯೋಜನೆ | 20% |
| | **ಒಟ್ಟು** | **60%** |

2) ಮುಂದುವರೆದು, ಜಿಲ್ಲಾ / ನಗರ ಪ್ರಾಧಿಕಾರ ಮಟ್ಟದಲ್ಲಿ ಕ.ಟಿ.ಪಿ.ಪಿ ಕಾಯ್ದೆಯನ್ವಯ ಮತ್ತು ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಖರೀದಿಸಬೇಕಾದ ಪುಸ್ತಕಗಳ ಶೇಖಡಾವಾರು ಪ್ರಮಾಣವನ್ನು ಈ ಕೆಳಕಂಡಂತೆ ಪರಿಷ್ಕರಿಸಿ ನಿಗದಿಪಡಿಸಿದೆ.

| ಜಿಲ್ಲಾ /ನಗರ ಪ್ರಾಧಿಕಾರದ ಮಟ್ಟದಲ್ಲಿ ಖರೀದಿಸುವ ಪುಸ್ತಕಗಳು | | |
|---|---|---|
| | | ಶೇಕಡಾವಾರು |
| 1 | ಸ್ಪರ್ಧಾತ್ಮಕ | 40% |
| 2 | ಪಠ್ಯಪುಸ್ತಕ | |
| 3 | ಸಾಂದರ್ಭಿಕ ಪರಾಮರ್ಶನ | |
| 4 | ಓದುಗರಿಂದ ಹೆಚ್ಚಿನ ಬೇಡಿಕೆ ಇರುವ ಅತ್ಯಂತ ವಿರಳ ಪುಸ್ತಕಗಳು | |

ಜಿಲ್ಲಾ / ನಗರ ಪ್ರಾಧಿಕಾರ ಮಟ್ಟದಲ್ಲಿ ಪುಸ್ತಕಗಳ ಖರೀದಿ ಸಂದರ್ಭದಲ್ಲಿ ಆಯಾ ವರ್ಷದಲ್ಲಿ ಪ್ರಕಟಣೆಯಾದ ಪ್ರಚಲಿತ ವಿದ್ಯಮಾನವನ್ನೊಳಗೊಂಡ (Best sellers) ಪುಸ್ತಕಗಳನ್ನು ಖರೀದಿಸುವುದು ಹಾಗೂ ಯಾವುದೇ ಕಾರಣಕ್ಕೂ ಒಂದು ವರ್ಷಕ್ಕಿಂತ ಹಳೆಯದಾದ ಪುಸ್ತಕಗಳನ್ನು ಖರೀದಿಸಬಾರದು.

ಜಿಲ್ಲಾ / ನಗರ ಪ್ರಾಧಿಕಾರ ಮಟ್ಟದಲ್ಲಿ ಖರೀದಿಸುವ ಪುಸ್ತಕಗಳ ವಿವರಗಳನ್ನು (Rate and Title ಸೇರಿದಂತೆ) ಸಕ್ಷಮ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಸಾರ್ವಜನಿಕ ಮಾಹಿತಿಗಾಗಿ ಪ್ರಚುರಪಡಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ /823 ವೆಚ್ಚ-8/2025, ದಿನಾಂಕ 12.01.2026ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

18/2/26

**(ಪ್ರಕಾಶ.ಎಸ್)**
ಸರ್ಕಾರದ ಅಧೀನ ಕಾರ್ಯದರ್ಶಿ
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ (ಪ್ರೌಢ)

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು(ಲೆಕ್ಕಪತ್ರ)/(ಆಡಿಟ್), ಕರ್ನಾಟಕ ಬೆಂಗಳೂರು-560 001.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ.
3. ಆಯುಕ್ತರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು.
4. ಎಲ್ಲಾ ಉಪ ನಿರ್ದೇಶಕರು/ಮುಖ್ಯ ಗ್ರಂಥಾಲಯಾಧಿಕಾರಿಗಳು (ಆಯುಕ್ತರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಇವರ ಮೂಲಕ)
5. ಶಾಖಾ ರಕ್ಷಾ ಕಡತ ಹೆಚ್ಚುವರಿ ಪ್ರತಿಗಳು.

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿಗಳು (ಆಡಳಿತ), ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

ಕರ್ನಾಟಕ ಸರ್ಕಾರ

ಸಂಖ್ಯೆ: ಇಪಿ 105 ಎಲ್‌ಐಬಿ 2025

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 18.02.2026

## ತಿದ್ದುಪಡಿ

ಸರ್ಕಾರದ ಆದೇಶ ಸಂಖ್ಯೆ: ಇಪಿ/105/ಎಲ್‌ಐಬಿ/2025, ದಿನಾಂಕ: 18.02.2026ರ ಆದೇಶ ಭಾಗದ ಕ್ರ.ಸಂ: 02ರಲ್ಲಿ ಕಂಡುಬರುವ **ಕೆ.ಟಿ.ಪಿ.ಪಿ ಕಾಯ್ದೆಯನ್ವಯ** ಎಂಬ ಪದಗಳನ್ನು **ಕೆ.ಟಿ.ಪಿ.ಪಿ ಕಾಯ್ದೆ ಮತ್ತು ನಿಯಮಗಳನ್ವಯ ಪಾರದರ್ಶಕ ಟೆಂಡರ್ ಮೂಲಕ** ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಪೂರ್ವ ಪ್ರಸ್ತಾಪಿತ ಮಾರ್ಪಾಟನ್ನು ಹೊರತುಪಡಿಸಿ ಸರ್ಕಾರದ ಆದೇಶ ಸಂಖ್ಯೆ: ಇಪಿ/105/ಎಲ್‌ಐಬಿ/2025, ದಿನಾಂಕ: 18.02.2026ರಲ್ಲಿ ಉಳಿದಂತೆ ಬೇರಾವುದೇ ಪರಿಷ್ಕರಣೆಗಳಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

18/2/26

**(ಪ್ರಕಾಶ.ಎಸ್)**
ಸರ್ಕಾರದ ಅಧೀನ ಕಾರ್ಯದರ್ಶಿ
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ (ಪ್ರೌಢ)

18/2/26

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು(ಲೆಕ್ಕಪತ್ರ)/(ಆಡಿಟ್), ಕರ್ನಾಟಕ ಬೆಂಗಳೂರು-560 001.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ
3. ಆಯುಕ್ತರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು.
4. ಎಲ್ಲಾ ಉಪ ನಿರ್ದೇಶಕರು/ಮುಖ್ಯ ಗ್ರಂಥಾಲಯಾಧಿಕಾರಿಗಳು (ಆಯುಕ್ತರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಇವರ ಮೂಲಕ)
5. ಶಾಖಾ ರಕ್ಷಾ ಕಡತ ಹೆಚ್ಚುವರಿ ಪ್ರತಿಗಳು.

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿಗಳು (ಆಡಳಿತ), ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು